## ಶುಕ್ರವಾರ, ೧೩ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯ ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಗೌರವಾನ್ವಿತ ಡಾ.ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಿತು.

### ನಿರ್ಣಯ ಆರ್ ಇ : ಗುರಿಗಳು ಮತ್ತು ಉದ್ದೇಶಗಳು

**ಮಾನ್ಯ ಅಧ್ಯಕ್ಷರು** : ಈಗ ಪಂಡಿತ್ ಜವಾಹರಲಾಲ್ ನೆಹರು ಅವರು, ಅವರ ಹೆಸರಿನಲ್ಲಿರುವ ನಿರ್ಣಯವನ್ನು ಮಂಡಿಸುತ್ತಾರೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು: ಸಾಮಾನ್ಯ): *[ಮಾನ್ಯ ಅಧ್ಯಕ್ಷರೆ, ಈ ಸಂವಿಧಾನ ರಚನಾಸಭೆಯು ಕೆಲವು ದಿನಗಳಿಂದ ಸಭೆ ಸೇರಿಲ್ಲ. ಅದು ಬಹಳಷ್ಟು ಔಪಚಾರಿಕ ಕಲಾಪಗಳನ್ನು ನಡೆಸಿದೆ, ಆದರೆ ಮಾಡಬೇಕಾದದ್ದು ಇನ್ನು ಬಹಳವಾಗಿದೆ. ನಾವು ಹಾದಿ ಮಾಡಿಕೊಳ್ಳುತ್ತಾ ಭೂಮಿಯನ್ನು ತೆರವುಗೊಳಿಸುತ್ತಾ ಸಂವಿಧಾನದ ಒಂದು ಭವ್ಯ ಸೌಧವನ್ನು ಅದರ ಮೇಲೆ ನಿರ್ಮಿಸಲು ಉದ್ದೇಶಿಸಿದ್ದೇವೆ. ಆದರೂ ನಾವು ಮುಂದೆ ಸಾಗುವ ಮುನ್ನ ನಾವು ಎಲ್ಲಿಗೆ ಹೋಗುತ್ತಿದ್ದೇವೆ ಮತ್ತು ಏನನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ ಎನ್ನುವುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಸೂಕ್ತ ಎಂದು ತೋರುತ್ತದೆ. ಅಂತಹ ಸಂದರ್ಭಗಳಲ್ಲಿ ವಿವರಗಳು ಅನಗತ್ಯ ಎನ್ನುವುದು ಸುಸ್ಪಷ್ಟ. ಕಟ್ಟುವಾಗ ಪ್ರತಿ ಇಟ್ಟಿಗೆಯನ್ನು ಪರಿಪಕ್ವ ವಿವೇಚನೆಯಿಂದ ಬಳಸುತ್ತೀರಿ ಎನ್ನುವುದರಲ್ಲಿ ಅನುಮಾನವಿಲ್ಲ. ಸಾಮಾನ್ಯವಾಗಿ ಒಬ್ಬನು ಒಂದು ಮನೆಯನ್ನು ಕಟ್ಟಬೇಕೆಂದು ಬಯಸಿದಾಗ ಆ ಸಂರಚನೆಯ ಒಂದು ನಕ್ಷೆಯನ್ನು ಹೊಂದಿರಬೇಕು, ಅನಂತರ ಅಗತ್ಯವಾದ ಕಟ್ಟಡ ಸಾಮಗ್ರಿಯನ್ನು ಸಂಗ್ರಹಿಸಬೇಕು. ಬಹಳ ದೀರ್ಘಕಾಲದಿಂದ ಒಂದು ಮುಕ್ತ ಭಾರತವನ್ನು ರಚಿಸುವುದಕ್ಕಾಗಿ ನಮ್ಮ ಮನಸ್ಸಿನಲ್ಲಿಯೇ ಅನೇಕ ನಕ್ಷೆಗಳನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಈಗ ವಾಸ್ತವವಾಗಿ ಕೆಲಸವನ್ನು ಪ್ರಾರಂಭಿಸುತ್ತಿರುವಾಗ ಈ ನಕ್ಷೆಯ ಸ್ಪಷ್ಟ ಚಿತ್ರಣವನ್ನು ನಮ್ಮ ಮುಂದೆಯೇ ನಿರೂಪಿಸಿಕೊಳ್ಳಬೇಕು, ಭಾರತದ ಜನರ ಮುಂದೆ ಮತ್ತು ಜಗತ್ತಿನ ಜನಸಮುದಾಯದ ಮುಂದೆ ಇರಿಸಬೇಕು ಎಂದು ನಾನು ಹೇಳಿದರೆ ನೀವು ಸಹಮತಿಸುತ್ತೀರಿ ಎಂದು ಭಾವಿಸುತ್ತೇನೆ. ನಿಮ್ಮ ಮುಂದೆ ನಾನು ಇರಿಸಲಿರುವ ನಿರ್ಣಯವು ನಮ್ಮ ಗುರಿಗಳ ಲಕ್ಷಣ ನಿರೂಪಣೆ ಮಾಡುತ್ತದೆ, ಯೋಜನೆಯ ಸ್ಥೂಲ ರೂಪುರೇಷೆಯನ್ನು ವರ್ಣಿಸುತ್ತದೆ ಮತ್ತು ನಾವು ಯಾವ ದಾರಿಯಲ್ಲಿ ಹೆಜ್ಜೆ ಹಾಕಬೇಕು ಎಂದು ತೋರುತ್ತದೆ.

ನಿಮಗೆಲ್ಲ ತಿಳಿದಿರುವಂತೆ ಈ ಸಂವಿಧಾನ ರಚನಾಸಭೆಯು ನಮ್ಮಲ್ಲಿ ಅನೇಕರು ಬಯಸಿದ ರೂಪದಲ್ಲಿ ಇಲ್ಲ. ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟು ಅದು ಅಸ್ತಿತ್ವಕ್ಕೆ ಬಂದಿದೆ ಮತ್ತು ಅದರ ಜನನದಲ್ಲಿ ಬ್ರಿಟಿಷ್ ಸರ್ಕಾರದ ಕೈವಾಡವಿದೆ. ಅವರು ಅದಕ್ಕೆ ಕೆಲವು ನಿಯಮಗಳನ್ನು ಜೋಡಿಸಿದ್ದಾರೆ. ಈ ಸಭೆಗೆ ಅಸ್ತಿವಾರ ಎಂದು ಕರೆಯಬಹುದಾದ ರಾಜ್ಯ ಪತ್ರವನ್ನು ಗಂಭೀರವಾದ ಪರ್ಯಾಲೋಚನೆಗಳ ಅನಂತರ ನಾವು ಅಂಗೀಕರಿಸಿದ್ದೇವೆ, ಮತ್ತು ಅದರ ಮಿತಿಗಳೊಳಗೇ ಕೆಲಸ ಮಾಡಲು ನಾವು ಪ್ರಯತ್ನಿಸಬೇಕಾಗಿದೆ. ಆದರೆ ಈ ಸಭೆಯು ಯಾವ ಆಕರದಿಂದ ತನ್ನ ಬಲವನ್ನು ಪಡೆದುಕೊಳ್ಳುತ್ತದೆ ಎನ್ನುವುದನ್ನು ನೀವು ನಿರ್ಲಕ್ಷಿಸಬಾರದು. ಸರ್ಕಾರಗಳು ರಾಜ್ಯ ಪತ್ರಗಳಿಂದ ಅಸ್ತಿತ್ವಕ್ಕೆ ಬರುವುದಿಲ್ಲ. ವಾಸ್ತವದಲ್ಲಿ ಸರ್ಕಾರಗಳು ಜನತೆಯ ಸಂಕಲ್ಪದ ಅಭಿವ್ಯಕ್ತಿ. ನಾವು ಇಂದು ಇಲ್ಲಿ ಸೇರಿರುವುದು ಏಕೆಂದರೆ, ನಮ್ಮ ಹಿಂದೆ ಜನತೆಯ ಶಕ್ತಿ ಇದೆ ಮತ್ತು ಈ

ಜನರು – ಯಾವುದೇ ಪಕ್ಷ ಅಥವಾ ಗುಂಪಿಗೆ ಸೇರಿದವರಲ್ಲ, ಸಮಸ್ತ ಜನತೆಯಾಗಿ – ಬಯಸಿದಷ್ಟು ದೂರ ನಾವು ಮುಂದೆ ಸಾಗಬಲ್ಲೆವು ಅಷ್ಟೆ. ಆದ್ದರಿಂದ ನಾವು ಯಾವಾಗಲೂ ಈ ಜನ ಸಮುದಾಯದ ಹೃದಯದಲ್ಲಿರುವ ತೀವ್ರವಾದ ಬಯಕೆಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿರಬೇಕು ಮತ್ತು ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡಬೇಕು.

ಅನೇಕ ಜನರು ಗೈರುಹಾಜರಾಗಿರುವುದಕ್ಕೆ ನನಗೆ ವಿಷಾದವಾಗುತ್ತಿದೆ. ಇಲ್ಲಿಗೆ ಬಂದು ಸಭೆಯಲ್ಲಿ ಭಾಗವಹಿಸುವ ಹಕ್ಕು ಇರುವ ಅನೇಕ ಜನ ಸದಸ್ಯರು ಇಂದು ಇಲ್ಲಿಲ್ಲ. ಒಂದು ಅರ್ಥದಲ್ಲಿ ಇದು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಬೇರೆಯವರಿಗೆ ಮುಜುಗರ ಉಂಟುಮಾಡುವ ಅಥವಾ ಯಾವುದೇ ತತ್ತ್ವದ ವಿರುದ್ಧ ಹೋಗುವಂತಹ ಏನನ್ನೂ ಮಾಡದ ಹಾಗೆ ನಾವು ಜಾಗ್ರತೆಯಿಂದಿರಬೇಕು. ಯಾರು ದೂರ ಸರಿದಿದ್ದಾರೋ ಅವರು ಅನತಿಕಾಲದಲ್ಲಿಯೇ ನಮ್ಮ ಪರ್ಯಾಲೋಚನೆಗಳಲ್ಲಿ ಸೇರಿಕೊಳ್ಳುತ್ತಾರೆ ಎಂದು ನಾವು ಆಶಿಸುತ್ತೇವೆ. ಏಕೆಂದರೆ ಈ ಸಂವಿಧಾನವು ಅದರ ಹಿಂದಿರುವ ಶಕ್ತಿಯು ತಳ್ಳುವಷ್ಟು ದೂರ ಮಾತ್ರ ಹೋಗಬಲ್ಲದು. ಭಾರತದ ಜನರು ಒಗ್ಗಟ್ಟಾಗಿರಬೇಕು ಎನ್ನುವುದು ಯಾವಾಗಲೂ ನಮ್ಮ ತೀವ್ರ ಅಪೇಕ್ಷೆಯಾಗಿತ್ತು ಮತ್ತು ಮುಂದೆ ಯಾವಾಗಲೂ ಆಗಿರುತ್ತದೆ. ಅದರಿಂದ ನಾವು ಸಮಸ್ತ ಭಾರತೀಯ ಜನಸಮುದಾಯಕ್ಕೆ ಅಂಗೀಕಾರಾರ್ಹವಾದ ಒಂದು ಸಂವಿಧಾನವನ್ನು ರಚಿಸಲು ಸಮರ್ಥರಾಗುತ್ತೇವೆ. ಅದೇ ಸಮಯದಲ್ಲಿ ಪ್ರಕಟವಾಗುವ ಸಂಗತಿಯೆಂದರೆ, ಒಂದು ಬೃಹತ್ ರಾಷ್ಟ್ರವು ಮುಂದಡಿ ಇಡತೊಡಗಿತೆಂದರೆ ಯಾವ ಪಕ್ಷವಾಗಲಿ ಅಥವಾ ಗುಂಪಾಗಲಿ ಅದನ್ನು ತಡೆಯಲಾಗದು. ಈ ಸದನವು, ಅದರ ಕೆಲವು ಸದಸ್ಯರ ಗೈರುಹಾಜರಿಯಲ್ಲಿ ಸಭೆ ಸೇರಿದ್ದರೂ, ತನ್ನ ಕಾರ್ಯಭಾರವನ್ನು ಮುಂದುವರಿಸುತ್ತದೆ ಮತ್ತು ಏನೇ ಆಗಲಿ ತನ್ನ ಕೆಲಸವನ್ನು ನಿರ್ವಹಿಸುತ್ತದೆ.

ನಿಮ್ಮ ಮುಂದೆ ನಾನು ಮಂಡಿಸಲಿರುವ ಈ ನಿರ್ಣಯವು ಒಂದು ಪ್ರತಿಜ್ಞಾವಚನದ ಸ್ವರೂಪದಲ್ಲಿದೆ. ಪರಿಪಕ್ವವಾದ ಪರ್ಯಾಲೋಚನೆಯ ಅನಂತರ ಅದರ ಒಕ್ಕಣೆಯನ್ನು ಸಿದ್ಧಗೊಳಿಸಲಾಗಿದೆ ಮತ್ತು ವಿವಾದವನ್ನು ನಿವಾರಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗಿದೆ. ಇಂತಹ ವಿಶಾಲವಾದ ದೇಶದಲ್ಲಿ ಅನೇಕ ವಿವಾದಾಂಶಗಳು ಖಂಡಿತವಾಗಿಯೂ ಇರುತ್ತವೆ. ಆದರೆ ನಾವು ಸಾಧ್ಯವಾದಷ್ಟೂ ವಿವಾದಗಳನ್ನು ನಿವಾರಿಸಲು ಪ್ರಯತ್ನ ಮಾಡಿದ್ದೇವೆ. ಜನರು ಸಾಮಾನ್ಯವಾಗಿ ಇಟ್ಟುಕೊಂಡಿರುವ ಮತ್ತು ಅಂಗೀಕರಿಸಿರುವ ಮೂಲ ನಿಯಮಗಳನ್ನು ಕುರಿತು ಈ ನಿರ್ಣಯವು ವ್ಯವಹರಿಸುತ್ತದೆ. ಬ್ರಿಟಿಷ್ ಸಂಪುಟವು ವಿಧಿಸುವ ಪರಿಮಿತಿಗಳ ಆಚೆ ಏನನ್ನೂ ಈ ನಿರ್ಣಯವು ಒಳಗೊಂಡಿಲ್ಲ ಅಥವಾ ಯಾವುದೇ ಭಾರತೀಯರಿಗೆ, ಅವನು ಯಾವುದೇ ಪಕ್ಷ ಅಥವಾ ಗುಂಪಿಗೇ ಸೇರಿರಲಿ, ತಿರಸ್ಕರಣೀಯವಾದ ಏನನ್ನೂ ಒಳಗೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ದುರದೃಷ್ಟವಶಾತ್ ನಮ್ಮ ದೇಶವು ಭಿನ್ನಾಭಿಪ್ರಾಯಗಳಿಂದ ತುಂಬಿ ತುಳುಕುತ್ತಿದೆ. ಆದರೆ ಪ್ರಾಯಃ ಕೆಲವರನ್ನು ಹೊರತು ಪಡಿಸಿ, ಯಾರೊಬ್ಬರೂ ಕೂಡ ಈ ನಿರ್ಣಯವು ಮಂಡಿಸುವ ಮೂಲ ನಿಯಮಗಳನ್ನು ಅಲ್ಲಗಳೆಯುವುದಿಲ್ಲ. ಒಂದು ಸಾರ್ವಭೌಮ ಭಾರತೀಯ ಗಣರಾಜ್ಯವನ್ನು ಹೊಂದುವುದು ನಮ್ಮ ದೃಢವಾದ ವಿಧ್ಯುಕ್ತ ನಿರ್ಧಾರ ಎಂದೂ ಈ ನಿರ್ಣಯವು ಸಾರುತ್ತದೆ. ಇಲ್ಲಿಯವರೆಗೂ ನಾವು ಗಣರಾಜ್ಯ ಎಂಬ ಶಬ್ದವನ್ನು ಪ್ರಸ್ತಾವಿಸಿಲ್ಲ; ಆದರೆ ಸ್ವತಂತ್ರವಾದ ಭಾರತವು ಗಣರಾಜ್ಯವಲ್ಲದೆ ಬೇರೇನೂ ಅಲ್ಲ ಎಂದು ನಿಮಗೆ ಚೆನ್ನಾಗಿ ಅರ್ಥವಾಗುತ್ತದೆ.

ಈ ಸಂದರ್ಭದಲ್ಲಿ, ಭಾರತದ ರಾಜ್ಯಗಳ ಪ್ರತಿನಿಧಿಗಳು ಉಪಸ್ಥಿತರಿಲ್ಲದಿರುವಾಗ ಈ ನಿರ್ಣಯವು ಭಾರತದ ರಾಜ್ಯಗಳ ಮೇಲೆ ಹೇಗೆ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ಸದನದ ಕೆಲವು ವಿಭಾಗಗಳು ಹಾಜರಿಲ್ಲದಿರುವಾಗ ಈ ನಿರ್ಣಯವನ್ನು ಪರಿಗಣಿಸುವ ವಿಚಾರವನ್ನು ಮುಂದಕ್ಕೆ ಹಾಕಬಹುದು ಎಂದು ಸಲಹೆಯನ್ನು ಕೂಡ ಕೊಡಲಾಗಿದೆ. ಈ ಸಲಹೆಯು

ತಿದ್ದುಪಡಿಯ ಸ್ವರೂಪವನ್ನು ಕೂಡ ತಳೆಯಬಹುದು. ನನ್ನ ಅಭಿಪ್ರಾಯದಲ್ಲಿ ಅಂತಹ ಒಂದು ತಿದ್ದುಪಡಿಯು ಕಾಲದ ಆಶಯಕ್ಕೆ ತಕ್ಕುದಾಗಿಲ್ಲ. ಏಕೆಂದರೆ, ಮೊದಲನೆಯ ಉದ್ದೇಶವನ್ನು ಅಂಗೀಕರಿಸದಿದ್ದರೆ, ಅಂದರೆ ನಮ್ಮ ಮುಂದೆ ಮಂಡಿಸುವುದು, ನಮ್ಮ ದೇಶದ ಮುಂದೆ ಮಂಡಿಸುವುದು ಮತ್ತು ಜಗತ್ತಿನ ಜನಸಮುದಾಯದ ಮುಂದೆ ಮಂಡಿಸುವುದು, ನಮ್ಮ ಪರ್ಯಾಲೋಚನೆಗಳೇ ಅರ್ಥಹೀನವಾಗುತ್ತವೆ ಮತ್ತು ನಿರ್ಜೀವವಾಗುತ್ತವೆ ಮತ್ತು ಜನರಿಗೆ ನಮ್ಮ ಕೆಲಸದಲ್ಲಿ ಆಸಕ್ತಿಯೇ ಇಲ್ಲದಂತಾಗುತ್ತದೆ ರಾಜ್ಯಗಳನ್ನು ಕುರಿತಂತೆ ನಮ್ಮ ಉದ್ದೇಶವೇನು ಎಂಬುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಭಾರತದ ಎಲ್ಲ ವಿಭಾಗಗಳು ಭಾವೀ ಭಾರತದ ಒಕ್ಕೂಟದಲ್ಲಿ ಸ್ವ–ಇಚ್ಛೆಯಿಂದ ಭಾಗವಹಿಸಬೇಕು ಎಂದು ನಾವು ಅಪೇಕ್ಷಿಸುತ್ತೇವೆ. ಆದರೆ ಯಾವ ರೀತಿಯಲ್ಲಿ ಮತ್ತು ಯಾವ ಬಗೆಯ ಸರ್ಕಾರದೊಡನೆ ಎನ್ನುವುದು ಅವರಿಗೆ ಬಿಟ್ಟದ್ದು. ನಿರ್ಣಯವು ಈ ವಿವರಗಳನ್ನು ಕುರಿತು ಹೇಳಲು ಹೋಗುವುದಿಲ್ಲ. ಅದು ಮೂಲ ನಿಯಮಗಳನ್ನು ಮಾತ್ರ ಒಳಗೊಂಡಿರುತ್ತದೆ. ಅದು ರಾಜ್ಯಗಳ ಮೇಲೆ ಅವುಗಳ ಇಷ್ಟಕ್ಕೆ ವಿರುದ್ಧವಾದುದನ್ನು ಏನನ್ನೂ ಹೇರುವುದಿಲ್ಲ. ಇಲ್ಲಿ ಪರಿಗಣಿಸಬೇಕಾದ ಅಂಶವೆಂದರೆ ಅವರು ಹೇಗೆ ನಮ್ಮನ್ನು ಕೂಡಿಕೊಳ್ಳುತ್ತಾರೆ ಮತ್ತು ಯಾವ ಬಗೆಯ ಆಡಳಿತವನ್ನು ಅವರು ಹೊಂದುತ್ತಾರೆ ಎನ್ನುವುದು. ಈ ವಿಚಾರವಾಗಿ ನನ್ನ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ನಾನು ಬಯಸುವುದಿಲ್ಲ. ಅದೇನೇ ಇದ್ದರೂ ನಾನು ಹೇಳಬೇಕಾದ ಸಂಗತಿ ಏನೆಂದರೆ ನಮ್ಮ ಮೂಲ ನಿಯಮಗಳ ವಿರುದ್ಧ ಹೋಗುವಂತಹ ಆಡಳಿತವನ್ನು ಯಾವುದೇ ರಾಜ್ಯವು ಇಟ್ಟುಕೊಳ್ಳುವಂತಿಲ್ಲ ಅಥವಾ ಭಾರತದ ಇತರ ಭಾಗಗಳಲ್ಲಿ ಲಭ್ಯವಾಗಿರುವುದಕ್ಕಿಂತ ಕಡಿಮೆ ಸ್ವಾತಂತ್ರ್ಯವನ್ನು ಕೊಡುವಂತಿಲ್ಲ. ಅವರು ಯಾವ ಸ್ವರೂಪದ ಸರ್ಕಾರವನ್ನು ಹೊಂದಿರುತ್ತಾರೆ ಅಥವಾ ಪ್ರಸ್ತುತ ರಾಜರು ಮತ್ತು ನವಾಬರು ಮುಂದುವರಿಯುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಬಗೆಗೆ ಈ ನಿರ್ಣಯವು ಆಸಕ್ತವಾಗಿಲ್ಲ. ಜನರು ತಮ್ಮ ರಾಜರನ್ನು ಹೊಂದಿರಲು ಅಪೇಕ್ಷಿಸುವುದು ತೀರ ಸಂಭವನೀಯ. ಆ ನಿರ್ಣಯ ಅವರಿಗೇ ಬಿಟ್ಟದ್ದು. ನಮ್ಮ ಗಣರಾಜ್ಯವು ಇಡೀ ಭಾರತವನ್ನೇ ಒಳಗೊಂಡಿರುತ್ತದೆ. ಅದರ ಒಂದು ಭಾಗವು ತನ್ನದೇ ಆದ ಮಾದರಿಯ ಆಡಳಿತವನ್ನು ಹೊಂದಬೇಕೆಂದು ಅಪೇಕ್ಷಿಸಿದರೆ, ಅದನ್ನು ಹೊಂದಲು ಆ ರಾಜ್ಯ ಸ್ವತಂತ್ರವಾಗಿರುತ್ತದೆ.

ಈ ನಿರ್ಣಯಕ್ಕೆ ಏನನ್ನಾದರೂ ಸೇರಿಸುವುದನ್ನು ಅಥವಾ ಏನನ್ನಾದರೂ ಅದರಿಂದ ತೆಗೆಯುವುದನ್ನು ನಾನು ಬಯಸುವುದಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗಬಹುದಾದ ಏನನ್ನೂ ಈ ಸದನವು ಮಾಡುವುದಿಲ್ಲ, ಅದರಿಂದಾಗಿ ಯಾವುದೇ ಸಮಯದಲ್ಲಿ ಈ ಸಮಸ್ಯೆಗಳಿಗೆ ಸಂಬಂಧಿಸಿರುವ ಆದರೆ ಇಂದು ಇಲ್ಲಿ ಉಪಸ್ಥಿತರಿಲ್ಲದ ಜನರು ಈ ಸದನವು ಕ್ರಮರಹಿತವಾದ ಮಾತಿನಲ್ಲಿ ತೊಡಗಿತ್ತು ಎಂದು ಹೇಳುವಂತಾಗಬಾರದು ಎನ್ನುವುದು ನನ್ನ ಆಶಯವಾಗಿದೆ.

ಈ ನಿರ್ಣಯವು ವಿವರಗಳನ್ನು ಕೊಡಲು ಹೋಗುವುದಿಲ್ಲ. ಅದರಲ್ಲಿ ರೂಪಿಸಿರುವ ಉದ್ದೇಶಗಳನ್ನು ಸಾಧಿಸಲು ಭಾರತವನ್ನು ನಾವು ಹೇಗೆ ಮುನ್ನಡೆಸಬೇಕು ಎಂಬುದನ್ನು ತೋರಿಸಲಷ್ಟೇ ಅದು ಬಯಸುತ್ತದೆ. ಅದರಲ್ಲಿರುವ ಮಾತುಗಳನ್ನು ನೀವು ಪರಿಗಣನೆಗೆ ತೆಗೆದುಕೊಳ್ಳುತ್ತೀರಿ ಮತ್ತು ಅವುಗಳನ್ನು ನೀವು ಒಪ್ಪಿಕೊಳ್ಳುತ್ತೀರಿ ಎಂದು ನಾನು ಆಶಿಸುತ್ತೇನೆ; ಆದರೆ ಮುಖ್ಯವಾದ ಸಂಗತಿಯೆಂದರೆ ಅದರ ಹಿಂದಿರುವ ಆಶಯ. ಕಾನೂನುಗಳನ್ನು ಶಬ್ದಗಳಿಂದ ಮಾಡಲಾಗುತ್ತದೆ, ಆದರೆ ಈ ನಿರ್ಣಯವು ಕಾನೂನಿಗಿಂತ ಉನ್ನತವಾಗಿರುವ ಒಂದು ಸಂಗತಿಯಾಗಿದೆ. ವಕೀಲರ ಹಾಗೆ ಅದರ ಶಬ್ದಗಳನ್ನು ನೀವು ಪರೀಕ್ಷಿಸಿದರೆ ನಿಮಗೆ ನಿರ್ಜೀವವಾದ ಸಂಗತಿ ಸಿಗುತ್ತದಷ್ಟೆ. ಪ್ರಸ್ತುತ ನಾವು ಎರಡು ಯುಗಗಳ ನಡುವೆ ನಿಂತಿದ್ದೇವೆ; ಹಳೆಯ ವ್ಯವಸ್ಥೆ ಕ್ಷಿಪ್ರವಾಗಿ ಬದಲಾಗುತ್ತಿದೆ, ಹೊಸದಕ್ಕೆ ಸ್ಥಳಾವಕಾಶ ಮಾಡಿಕೊಡುತ್ತಿದೆ. ಅಂತಹ ಸಂಧಿಕಾಲದಲ್ಲಿ ನಾವು ಭಾರತಕ್ಕೆ ಮತ್ತು ಸಮಸ್ತ ಜಗತ್ತಿಗೆ ಒಂದು ಜ್ವಲಂತವಾದ ಸಂದೇಶವನ್ನು ನೀಡಬೇಕಾಗಿದೆ. ಪ್ರಸ್ತುತ ಅದನ್ನು ಪ್ರಯತ್ನ ಮಾಡುವ ನಿರ್ಧಾರ ತೆಗೆದುಕೊಂಡಿದ್ದೇವೆ ಎಂಬುದನ್ನು ತೋರಿಸುವ ಸಂದೇಶವನ್ನು ನಾವು ಕಳುಹಿಸಬೇಕಾಗಿದೆ.

ಈ ನಿರ್ಣಯವು, ಈ ಘೋಷಣೆಯು ಅಂತಿಮವಾಗಿ ಯಾವ ಆಕಾರ ಅಥವಾ ರೂಪವನ್ನು ತಳೆಯುತ್ತದೆ ಎನ್ನುವುದನ್ನು ಆಮೇಲೆ ನೋಡೋಣ. ಹೇಗಾದರೂ ಒಂದು ಸಂಗತಿಯಂತೂ ನಿಶ್ಚಿತ: ಅದು ಒಂದು ಕಾನೂನು ಅಲ್ಲ; ಆದರೆ ಅದು ಮಾನವರ ಮನಸ್ಸುಗಳಲ್ಲಿ ಜೀವಸಂಚಾರ ಮಾಡುವಂತಹ ಒಂದು ಸಂಗತಿ.

ವಿಶೇಷ ಸ್ವರೂಪದ ಈ ನಿರ್ಣಯವನ್ನು ಈ ಸದನವು ಅನುಮೋದಿಸುತ್ತದೆ ಎಂದು ನಾನು ಆಶಿಸುತ್ತೇನೆ. ಅದು ನಾವು ಮತ್ತು ಈ ಮಹಾನ್ ದೇಶದಲ್ಲಿ ವಾಸವಾಗಿರುವ ನಮ್ಮ ಕೋಟ್ಯಂತರ ಸೋದರ ಸೋದರಿಯರ ನಡುವಣ ಒಂದು ವಾಗ್ದಾನ. ಅದು ಅಂಗೀಕೃತವಾದರೆ ನಾವು ನೆರವೇರಿಸಬೇಕಾದ ಒಂದು ಬಗೆಯ ಪ್ರತಿಜ್ಞಾವಚನವಾಗುತ್ತದೆ. ಈ ನಿರೀಕ್ಷೆಯೊಡನೆ ಮತ್ತು ಈ ರೂಪದಲ್ಲಿ ನಾನು ಅದನ್ನು ನಿಮ್ಮ ಮುಂದೆ ಇರಿಸುತ್ತಿದ್ದೇನೆ. ನಿಮ್ಮ ಬಳಿ ಅದರ ಹಿಂದೂಸ್ತಾನಿ ಪ್ರತಿಗಳಿವೆ. ಆದ್ದರಿಂದ ಅದನ್ನು ಮತ್ತೆ ಓದಿ ನಿಮ್ಮ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ ಅಥವಾ ಅದನ್ನು ಇಂಗ್ಲಿಷ್‌ನಲ್ಲಿ ಓದುತ್ತೇನೆ ಮತ್ತು ಅದನ್ನು ಕುರಿತು ಮುಂದಿನ ಮಾತುಗಳನ್ನು ಆ ಭಾಷೆಯಲ್ಲಿಯೇ ನುಡಿಯುತ್ತೇನೆ.]*

ಇದನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ:

"(೧) ಈ ಸಂವಿಧಾನ ರಚನಾಸಭೆಯು ಭಾರತವನ್ನು ಒಂದು ಸ್ವತಂತ್ರ ಸಾರ್ವಭೌಮ ಗಣರಾಜ್ಯವೆಂದು ಘೋಷಿಸಲು ಮತ್ತು ಭಾವೀ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಲು ದೃಢವಾದ ಮತ್ತು ವಿಧ್ಯುಕ್ತವಾದ ಘೋಷಣೆಯನ್ನು ಮಾಡುತ್ತದೆ;

(೨) ಅದರಲ್ಲಿ ಈಗ ಬ್ರಿಟಿಷ್ ಇಂಡಿಯಾದಲ್ಲಿ ಒಳಗೊಂಡಿರುವ ಪ್ರದೇಶಗಳು, ಈಗ ಭಾರತದ ರಾಜ್ಯವಾಗಿರುವ ಪ್ರದೇಶಗಳು ಮತ್ತು ಬ್ರಿಟಿಷ್ ಇಂಡಿಯಾದ ಹೊರಗಿರುವ ಭಾರತದ ಇತರ ಭಾಗಗಳು ಮತ್ತು ಸ್ವತಂತ್ರ ಸಾರ್ವಭೌಮ ಭಾರತದಲ್ಲಿ ಘಟಕವಾಗಿ ಸೇರಲು ಇಚ್ಛಿಸುವ ರಾಜ್ಯಗಳು ಮತ್ತು ಅಂತಹ ಇತರ ಪ್ರದೇಶಗಳು ಇಂತಹವುಗಳೆಲ್ಲ ಸೇರಿ ಒಂದು ಒಕ್ಕೂಟವಾಗಬೇಕು; ಮತ್ತು

(೩) ಅದರಲ್ಲಿ ಸದರಿ ಪ್ರದೇಶಗಳು ತಮ್ಮ ಪ್ರಸ್ತುತ ಸರಹದ್ದುಗಳಲ್ಲಿರಲಿ ಅಥವಾ ಸಂವಿಧಾನ ರಚನಾಸಭೆಯು ನಿರ್ಧರಿಸಬಹುದಾದ ಅಂತಹ ಇತರ ಸರಹದ್ದುಗಳಲ್ಲಿರಲಿ ಮತ್ತು ಅನಂತರ ಸಂವಿಧಾನದ ಕಾನೂನಿನ ಪ್ರಕಾರ ಸ್ವಯಮಾಧಿಕಾರದ ಘಟಕಗಳ ಸ್ಥಾನಮಾನವನ್ನು ಪಡೆಯುತ್ತವೆ ಮತ್ತು ಉಳಿಸಿಕೊಳ್ಳುತ್ತವೆ, ಅದರ ಜೊತೆಯಲ್ಲಿ ಉಳಿಕೆ ಅಧಿಕಾರವನ್ನು ಪಡೆಯುತ್ತವೆ ಮತ್ತು ಸರ್ಕಾರ ಹಾಗೂ ಆಡಳಿತದ ಎಲ್ಲ ಅಧಿಕಾರಗಳು ಮತ್ತು ಕಾರ್ಯಭಾರಗಳನ್ನು ಚಲಾಯಿಸುತ್ತವೆ; ಇದರಲ್ಲಿ ಹೊರತುಪಡಿಸಿದ ಸಂಗತಿಯೆಂದರೆ ಒಕ್ಕೂಟಕ್ಕೆ ವಹಿಸಲಾದ ಅಥವಾ ಹಂಚಲಾದ ಅಂತಹ ಅಧಿಕಾರಗಳು ಮತ್ತು ಕಾರ್ಯಭಾರಗಳು ಅಥವಾ ಒಕ್ಕೂಟದಲ್ಲಿ ಅಂತರ್ಗತವಾಗಿರುವ ಅಥವಾ ಸೂಚಿತವಾಗಿರುವ ಅಥವಾ ಅದರಿಂದ ಉದ್ಭವಿಸುವ ಅಧಿಕಾರಗಳು ಮತ್ತು ಕಾರ್ಯಭಾರಗಳು; ಮತ್ತು

(೪) ಅದರಲ್ಲಿ ಸಾರ್ವಭೌಮ ಸ್ವತಂತ್ರ ಭಾರತದ, ಅದರ ಅಂಗಭಾಗಗಳ ಮತ್ತು ಸರ್ಕಾರದ ಅವಯವಗಳ ಎಲ್ಲ ಅಧಿಕಾರ ಮತ್ತು ವಿಧಾಯಕ ಶಕ್ತಿಯು ಜನರಿಂದ ನಿಷ್ಪನ್ನವಾಗುತ್ತವೆ; ಮತ್ತು

(೫) ಅದರಲ್ಲಿ ಭಾರತದ ಎಲ್ಲ ಜನರಿಗೆ, ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಒಳಪಟ್ಟು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ಸ್ಥಾನಮಾನ, ಅವಕಾಶ ಮತ್ತು ಕಾನೂನಿನ ಮುಂದೆ ಸಮಾನತೆ; ಆಲೋಚನೆ, ಅಭಿವ್ಯಕ್ತಿ, ನಂಬಿಕೆ, ಆರಾಧನೆಯ ಧರ್ಮಶ್ರದ್ಧೆ, ವೃತ್ತಿ, ಸಮಾನ ಉದ್ದೇಶಕ್ಕಾಗಿ ಜತೆಗೂಡುವಿಕೆ ಮತ್ತು ಕ್ರಿಯೆಯನ್ನು ಖಾತರಿಗೊಳಿಸುವುದು ಮತ್ತು ದೊರಕಿಸಿಕೊಡುವುದು; ಮತ್ತು

ಈ ನಿರ್ಣಯವು, ಈ ಘೋಷಣೆಯು ಅಂತಿಮವಾಗಿ ಯಾವ ಆಕಾರ ಅಥವಾ ರೂಪವನ್ನು ತಳೆಯುತ್ತದೆ ಎನ್ನುವುದನ್ನು ಆಮೇಲೆ ನೋಡೋಣ. ಹೇಗಾದರೂ ಒಂದು ಸಂಗತಿಯಂತೂ ನಿಶ್ಚಿತ: ಅದು ಒಂದು ಕಾನೂನು ಅಲ್ಲ; ಆದರೆ ಅದು ಮಾನವರ ಮನಸ್ಸುಗಳಲ್ಲಿ ಜೀವಸಂಚಾರ ಮಾಡುವಂತಹ ಒಂದು ಸಂಗತಿ.

ವಿಶೇಷ ಸ್ವರೂಪದ ಈ ನಿರ್ಣಯವನ್ನು ಈ ಸದನವು ಅನುಮೋದಿಸುತ್ತದೆ ಎಂದು ನಾನು ಆಶಿಸುತ್ತೇನೆ. ಅದು ನಾವು ಮತ್ತು ಈ ಮಹಾನ್ ದೇಶದಲ್ಲಿ ವಾಸವಾಗಿರುವ ನಮ್ಮ ಕೋಟ್ಯಂತರ ಸೋದರ ಸೋದರಿಯರ ನಡುವಣ ಒಂದು ವಾಗ್ದಾನ. ಅದು ಅಂಗೀಕೃತವಾದರೆ ನಾವು ನೆರವೇರಿಸಬೇಕಾದ ಒಂದು ಬಗೆಯ ಪ್ರತಿಜ್ಞಾವಚನವಾಗುತ್ತದೆ. ಈ ನಿರೀಕ್ಷೆಯೊಡನೆ ಮತ್ತು ಈ ರೂಪದಲ್ಲಿ ನಾನು ಅದನ್ನು ನಿಮ್ಮ ಮುಂದೆ ಇರಿಸುತ್ತಿದ್ದೇನೆ. ನಿಮ್ಮ ಬಳಿ ಅದರ ಹಿಂದೂಸ್ತಾನಿ ಪ್ರತಿಗಳಿವೆ. ಆದ್ದರಿಂದ ಅದನ್ನು ಮತ್ತೆ ಓದಿ ನಿಮ್ಮ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ ಅಥವಾ ಅದನ್ನು ಇಂಗ್ಲಿಷ್‌ನಲ್ಲಿ ಓದುತ್ತೇನೆ ಮತ್ತು ಅದನ್ನು ಕುರಿತು ಮುಂದಿನ ಮಾತುಗಳನ್ನು ಆ ಭಾಷೆಯಲ್ಲಿಯೇ ನುಡಿಯುತ್ತೇನೆ.]*

ಇದನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ:

"(೧) ಈ ಸಂವಿಧಾನ ರಚನಾಸಭೆಯು ಭಾರತವನ್ನು ಒಂದು ಸ್ವತಂತ್ರ ಸಾರ್ವಭೌಮ ಗಣರಾಜ್ಯವೆಂದು ಘೋಷಿಸಲು ಮತ್ತು ಭಾವೀ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಲು ದೃಢವಾದ ಮತ್ತು ವಿಧ್ಯುಕ್ತವಾದ ಘೋಷಣೆಯನ್ನು ಮಾಡುತ್ತದೆ;

(೨) ಅದರಲ್ಲಿ ಈಗ ಬ್ರಿಟಿಷ್ ಇಂಡಿಯಾದಲ್ಲಿ ಒಳಗೊಂಡಿರುವ ಪ್ರದೇಶಗಳು, ಈಗ ಭಾರತದ ರಾಜ್ಯವಾಗಿರುವ ಪ್ರದೇಶಗಳು ಮತ್ತು ಬ್ರಿಟಿಷ್ ಇಂಡಿಯಾದ ಹೊರಗಿರುವ ಭಾರತದ ಇತರ ಭಾಗಗಳು ಮತ್ತು ಸ್ವತಂತ್ರ ಸಾರ್ವಭೌಮ ಭಾರತದಲ್ಲಿ ಘಟಕವಾಗಿ ಸೇರಲು ಇಚ್ಛಿಸುವ ರಾಜ್ಯಗಳು ಮತ್ತು ಅಂತಹ ಇತರ ಪ್ರದೇಶಗಳು ಇಂತಹವುಗಳೆಲ್ಲ ಸೇರಿ ಒಂದು ಒಕ್ಕೂಟವಾಗಬೇಕು; ಮತ್ತು

(೩) ಅದರಲ್ಲಿ ಸದರಿ ಪ್ರದೇಶಗಳು ತಮ್ಮ ಪ್ರಸ್ತುತ ಸರಹದ್ದುಗಳಲ್ಲಿರಲಿ ಅಥವಾ ಸಂವಿಧಾನ ರಚನಾಸಭೆಯು ನಿರ್ಧರಿಸಬಹುದಾದ ಅಂತಹ ಇತರ ಸರಹದ್ದುಗಳಲ್ಲಿರಲಿ ಮತ್ತು ಅನಂತರ ಸಂವಿಧಾನದ ಕಾನೂನಿನ ಪ್ರಕಾರ ಸ್ವಯಮಾಧಿಕಾರದ ಘಟಕಗಳ ಸ್ಥಾನಮಾನವನ್ನು ಪಡೆಯುತ್ತವೆ ಮತ್ತು ಉಳಿಸಿಕೊಳ್ಳುತ್ತವೆ, ಅದರ ಜೊತೆಯಲ್ಲಿ ಉಳಿಕೆ ಅಧಿಕಾರವನ್ನು ಪಡೆಯುತ್ತವೆ ಮತ್ತು ಸರ್ಕಾರ ಹಾಗೂ ಆಡಳಿತದ ಎಲ್ಲ ಅಧಿಕಾರಗಳು ಮತ್ತು ಕಾರ್ಯಭಾರಗಳನ್ನು ಚಲಾಯಿಸುತ್ತವೆ; ಇದರಲ್ಲಿ ಹೊರತುಪಡಿಸಿದ ಸಂಗತಿಯೆಂದರೆ ಒಕ್ಕೂಟಕ್ಕೆ ವಹಿಸಲಾದ ಅಥವಾ ಹಂಚಲಾದ ಅಂತಹ ಅಧಿಕಾರಗಳು ಮತ್ತು ಕಾರ್ಯಭಾರಗಳು ಅಥವಾ ಒಕ್ಕೂಟದಲ್ಲಿ ಅಂತರ್ಗತವಾಗಿರುವ ಅಥವಾ ಸೂಚಿತವಾಗಿರುವ ಅಥವಾ ಅದರಿಂದ ಉದ್ಭವಿಸುವ ಅಧಿಕಾರಗಳು ಮತ್ತು ಕಾರ್ಯಭಾರಗಳು; ಮತ್ತು

(೪) ಅದರಲ್ಲಿ ಸಾರ್ವಭೌಮ ಸ್ವತಂತ್ರ ಭಾರತದ, ಅದರ ಅಂಗಭಾಗಗಳ ಮತ್ತು ಸರ್ಕಾರದ ಅವಯವಗಳ ಎಲ್ಲ ಅಧಿಕಾರ ಮತ್ತು ವಿಧಾಯಕ ಶಕ್ತಿಯು ಜನರಿಂದ ನಿಷ್ಪನ್ನವಾಗುತ್ತವೆ; ಮತ್ತು

(೫) ಅದರಲ್ಲಿ ಭಾರತದ ಎಲ್ಲ ಜನರಿಗೆ, ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಒಳಪಟ್ಟು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ಸ್ಥಾನಮಾನ, ಅವಕಾಶ ಮತ್ತು ಕಾನೂನಿನ ಮುಂದೆ ಸಮಾನತೆ; ಆಲೋಚನೆ, ಅಭಿವ್ಯಕ್ತಿ, ನಂಬಿಕೆ, ಆರಾಧನೆಯ ಧರ್ಮಶ್ರದ್ಧೆ, ವೃತ್ತಿ, ಸಮಾನ ಉದ್ದೇಶಕ್ಕಾಗಿ ಜತೆಗೂಡುವಿಕೆ ಮತ್ತು ಕ್ರಿಯೆಯನ್ನು ಖಾತರಿಗೊಳಿಸುವುದು ಮತ್ತು ದೊರಕಿಸಿಕೊಡುವುದು; ಮತ್ತು

(೬) ಅದರಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ಬುಡಕಟ್ಟು ಪ್ರದೇಶದವರು ಮತ್ತು ದಲಿತವರ್ಗದವರು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತವಾದ ರಕ್ಷಣೆಯನ್ನು ಒದಗಿಸಬೇಕು; ಮತ್ತು

(೭) ಆ ಮೂಲಕ ನಾಗರಿಕ ರಾಷ್ಟ್ರಗಳ ನ್ಯಾಯ ಮತ್ತು ಕಾನೂನುಗಳ ಪ್ರಕಾರ ಗಣರಾಜ್ಯದ ಪ್ರದೇಶ ಮತ್ತು ನೆಲ, ಸಮುದ್ರ ಮತ್ತು ಆಕಾಶದಲ್ಲಿ ಅದರ ಸಾರ್ವಭೌಮ ಹಕ್ಕುಗಳ ಸಮಗ್ರತೆಯನ್ನು ಪಾಲಿಸಿಕೊಂಡು ಬರಬೇಕು; ಮತ್ತು

(೮) ಈ ಪುರಾತನ ದೇಶವು ಜಗತ್ತಿನಲ್ಲಿ ತನ್ನ ನ್ಯಾಯಸಮ್ಮತವಾದ ಮತ್ತು ಗೌರವಾನ್ವಿತವಾದ ಸ್ಥಾನವನ್ನು ಗಳಿಸಬೇಕು ಮತ್ತು ಜಗತ್ತಿನ ಶಾಂತಿ ಹಾಗೂ ಮನುಕುಲದ ಕ್ಷೇಮಾಭಿವೃದ್ಧಿಯ ಪ್ರವರ್ತನೆಗಾಗಿ ತನ್ನ ಪೂರ್ಣ ಹಾಗೂ ಮನಃಪೂರ್ವಕವಾದ ಕೊಡುಗೆಯನ್ನು ನೀಡಬೇಕು.”

ಮಾನ್ಯರೆ, ಇದು ಸಂವಿಧಾನ ರಚನಾಸಭೆಯ ಮೊದಲನೆಯ ಅಧಿವೇಶನದ ಐದನೆಯ ದಿನ. ಇಲ್ಲಿಯವರೆಗೆ ನಾವು ಕೆಲವು ಅಗತ್ಯವಾದ ತಾತ್ಕಾಲಿಕವಾದ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಶ್ರಮಿಸಿದ್ದೇವೆ. ನಾವು ಕೆಲಸ ಮಾಡಲು ಒಂದು ಮುಕ್ತವಾದ ಕ್ಷೇತ್ರವು ತೆರೆದುಕೊಂಡಿದೆ; ನಾವು ನೆಲವನ್ನು ಸಿದ್ಧಗೊಳಿಸಬೇಕು, ಅದನ್ನು ಈ ಕೆಲವು ದಿನಗಳಿಂದ ನಾವು ಮಾಡುತ್ತಿದ್ದೇವೆ. ನಾವು ಮಾಡಬೇಕಾದದ್ದು ಇನ್ನೂ ಬಹಳ ಇದೆ. ನಾವು ನಮ್ಮ ವಿಧಾನಗಳ ನಿಯಮಗಳನ್ನು ಅನುಮೋದಿಸಬೇಕು ಮತ್ತು ನಿಜವಾದ ಹೆಜ್ಜೆಯನ್ನು ಮುಂದಿಡುವ ಮೊದಲು ಸಮಿತಿಗಳು ಮುಂತಾದವುಗಳನ್ನು ನೇಮಿಸಬೇಕು. ನಿಜವಾದ ಕೆಲಸವೆಂದರೆ ಈ ಸಂವಿಧಾನ ರಚನಾಸಭೆಯ ಕಾರ್ಯ. ಅದೆಂದರೆ ರಾಷ್ಟ್ರದ ಕನಸು ಮತ್ತು ಮಹತ್ವಾಕಾಂಕ್ಷೆಗೆ ಮುದ್ರಿತ ಮತ್ತು ಲಿಖಿತ ಶಬ್ದಗಳ ಆಕಾರವನ್ನು ಕೊಡುವ ಮಹಾನ್ ಸಾಹಸ. ಆದರೆ ಈಗಲೂ ಕೂಡ, ಈ ಹಂತದಲ್ಲಿ ನಮಗೆ, ಈ ಸಭೆಯ ಕಡೆಗೆ ನೋಡುತ್ತಿರುವವರಿಗೆ, ನಮ್ಮ ಕಡೆಗೆ ನೋಡುತ್ತಿರುವ ಈ ದೇಶದ ಲಕ್ಷಾಂತರ ಜನರಿಗೆ ಮತ್ತು ವಿಶಾಲ ಜಗತ್ತಿಗೆ ನಾವು ಏನು ಮಾಡಬಹುದು, ಏನನ್ನು ಸಾಧಿಸಲು ನಾವು ಉದ್ದೇಶಿಸಿದ್ದೇವೆ, ನಾವು ಎತ್ತಕಡೆ ಸಾಗಿದ್ದೇವೆ ಎಂಬ ಬಗೆಗೆ ಏನಾದರೊಂದು ಸೂಚನೆಯನ್ನು ನಾವು ಕೊಡಬೇಕಾದದ್ದು ಖಂಡಿತವಾಗಿಯೂ ಅಪೇಕ್ಷಣೀಯ. ಈ ಉದ್ದೇಶದಿಂದ ನಾನು ಈ ಸದನದ ಮುಂದೆ ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ಇದು ಒಂದು ನಿರ್ಣಯ, ಆದರೂ ಒಂದು ನಿರ್ಣಯಕ್ಕಿಂತಲೂ ತೀರ ಏನೋ ಒಂದು ಹೆಚ್ಚಿನದಾಗಿದೆ. ಇದು ಒಂದು ಘೋಷಣೆ. ಇದು ಒಂದು ದೃಢವಾದ ನಿರ್ಧಾರ. ಅದು ಒಂದು ಪ್ರತಿಜ್ಞಾವಚನ ಮತ್ತು ಒಂದು ವಾಗ್ದಾನ. ಇದು ನಮಗೆಲ್ಲರಿಗೂ ಒಂದು ಸಮರ್ಪಣೆ ಎಂದು ನಾನು ಭಾವಿಸುತ್ತೇನೆ. ನಾನು ಆಶಿಸುವುದೇನೆಂದರೆ, ಗೌರವಯುತವಾಗಿ ನಾನು ಹೇಳಬಹುದಾದುದೆಂದರೆ, ಈ ಸದನವು ಈ ನಿರ್ಣಯವನ್ನು ಸಂಕುಚಿತವಾದ ಕಾನೂನಿನ ಪದಗಳೆಂಬ ಭಾವನೆಯಿಂದ ಪರಿಗಣಿಸಬಾರದು, ಬದಲಿಗೆ ಈ ನಿರ್ಣಯದ ಹಿಂದಿರುವ ಮನೋಭಾವನೆಯನ್ನು ನೋಡಬೇಕು. ಅನೇಕ ವೇಳೆ ಶಬ್ದಗಳು ಜಾದೂ ಮಾಡುತ್ತವೆ, ಆದರೆ ಕೆಲವು ಸಲ ಶಬ್ದಗಳ ಜಾದೂ ಕೂಡ ಮನುಷ್ಯನ ಮನೋಭಾವನೆಯನ್ನು ಮತ್ತು ಒಂದು ರಾಷ್ಟ್ರದ ತೀವ್ರ ಬಯಕೆಗಳನ್ನು ಸಂವಹನ ಮಾಡಲಾರದು. ಆದ್ದರಿಂದ ಇಂದು ಭಾರತದ ಜನರ ಹೃದಯಗಳಲ್ಲಿ ಮತ್ತು ಮನಸ್ಸುಗಳಲ್ಲಿ ಇರುವ ತೀವ್ರವಾದ ಬಯಕೆಯನ್ನು ಈ ನಿರ್ಣಯವು ಸಂಪೂರ್ಣವಾಗಿ ಸಂವಹನ ಮಾಡುತ್ತದೆ ಎಂದು ನಾನು ಹೇಳಲಾರೆ. ಇಷ್ಟು ದೀರ್ಘಕಾಲ ನಾವು ಏನನ್ನು ಯೋಚಿಸುತ್ತಿದ್ದೆವು ಅಥವಾ ಕನಸು ಕಾಣುತ್ತಿದ್ದೆವು ಮತ್ತು ನಿಕಟ ಭವಿಷ್ಯದಲ್ಲಿ ಏನನ್ನು ಸಾಧಿಸಬೇಕೆಂದು ಆಶಿಸುತ್ತಿದ್ದೇವೆ ಎಂದು ಜಗತ್ತಿಗೆ ತೀರ ಮೆಲುದನಿಯಲ್ಲಿ ಅದು ಹೇಳಲು ಪ್ರಯತ್ನಿಸುತ್ತಿದೆ. ಈ ಮನೋಭಾವನೆಯಿಂದ ನಾನು ಈ ನಿರ್ಣಯವನ್ನು ಈ ಸದನದ ಮುಂದೆ ಮಂಡಿಸುವ ಸಾಹಸ ಮಾಡಿದ್ದೇನೆ ಮತ್ತು ಅದೇ ಮನೋಭಾವದಿಂದ ಈ ಸದನವು ಅದನ್ನು ಸ್ವೀಕರಿಸುತ್ತದೆ ಮತ್ತು ಅಂತಿಮವಾಗಿ

ಅಂಗೀಕರಿಸುತ್ತದೆ ಎಂದು ನಾನು ನಂಬುತ್ತೇನೆ. ಮತ್ತು ಮಾನ್ಯರೆ, ಈ ನಿರ್ಣಯವನ್ನು ಅನುಮೋದಿಸುವ ಸಮಯ ಬಂದಾಗ ಅದನ್ನು ಔಪಚಾರಿಕವಾಗಿ ಕೈ ಎತ್ತುವ ಮೂಲಕ ಮಾಡುವುದು ಬೇಡ, ಆದರೆ ಅದಕ್ಕಿಂತ ಹೆಚ್ಚು ವಿಧ್ಯುಕ್ತವಾಗಿ ನಾವೆಲ್ಲರೂ ಎದ್ದು ನಿಂತು ಹೊಸದಾಗಿ ಪ್ರತಿಜ್ಞಾವಚನವನ್ನು ಸ್ವೀಕರಿಸುವ ರೀತಿಯಲ್ಲಿ ಮಾಡಬೇಕೆಂದು ಸಕಲ ಗೌರವಗಳೊಡನೆ ನಾನು ಸಲಹೆ ಮಾಡಬಹುದೆ?

ಅನೇಕ ಜನರು ಗೈರುಹಾಜರಾಗಿದ್ದಾರೆ ಮತ್ತು ಇಲ್ಲಿಗೆ ಬರಲು ಹಕ್ಕುಳ್ಳ ಅನೇಕ ಸದಸ್ಯರು ಬಂದಿಲ್ಲ ಎಂದು ಈ ಸದನಕ್ಕೆ ಗೊತ್ತು. ಆ ವಿಚಾರವಾಗಿ ನಮಗೆ ವಿಷಾದವಾಗುತ್ತಿದೆ. ಏಕೆಂದರೆ, ಸಾಧ್ಯವಾದಷ್ಟೂ ಹೆಚ್ಚು ಜನರನ್ನು, ಭಾರತದ ವಿವಿಧ ಭಾಗಗಳಿಂದ ಮತ್ತು ವಿವಿಧ ಗುಂಪುಗಳಿಂದ ಸಾಧ್ಯವಾದಷ್ಟೂ ಹೆಚ್ಚು ಜನ ಪ್ರತಿನಿಧಿಗಳನ್ನು ನಮ್ಮೊಡನೆ ಸೇರಿಸಿಕೊಳ್ಳಬೇಕೆನ್ನುವುದು ನಮ್ಮ ಅಭೀಪ್ಸೆಯಾಗಿದ್ದಿರಬೇಕು. ನಾವು ಒಂದು ಪ್ರಚಂಡವಾದ ಕಾರ್ಯವನ್ನು ಕೈಗೆತ್ತಿಕೊಂಡಿದ್ದೇವೆ ಮತ್ತು ಆ ಕಾರ್ಯದಲ್ಲಿ ನಾವು ಎಲ್ಲರ ಸಹಕಾರವನ್ನೂ ಕೋರುತ್ತೇವೆ. ಏಕೆಂದರೆ, ನಾವು ರೂಪಿಸಿಕೊಂಡಿರುವ ಭಾರತದ ಭವಿಷ್ಯವು ಯಾವುದೇ ಗುಂಪು ಅಥವಾ ವಿಭಾಗ ಅಥವಾ ಪ್ರಾಂತ್ಯ ಅಥವಾ ಬೇರೆ ಯಾವುದಕ್ಕೋ ಸೀಮಿತವಾಗಿಲ್ಲ, ಬದಲಿಗೆ ಅದು ಭಾರತದ ಎಲ್ಲ ನಲವತ್ತು ಕೋಟಿ ಜನರನ್ನೂ ಒಳಗೊಂಡಿದೆ ಮತ್ತು ಗಾಢವಾದ ವಿಷಾದದೊಡನೆ ಕೆಲವು ಆಸನಗಳು ಖಾಲಿಯಾಗಿರುವುದನ್ನು ನಾವು ಗಮನಿಸುತ್ತೇವೆ ಮತ್ತು ಇಲ್ಲಿ ಇರಬಹುದಾಗಿದ್ದ ಕೆಲವು ಸಹೋದ್ಯೋಗಿಗಳು ಗೈರುಹಾಜರಾಗಿರುವುದನ್ನು ನೋಡುತ್ತೇವೆ. ನಾನು ಭಾವಿಸುವುದೇನೆಂದರೆ, ನಾನು ಆಶಿಸುವುದೇನೆಂದರೆ ಅವರು ಖಂಡಿತ ಬರುತ್ತಾರೆ ಮತ್ತು ಈ ಸದನಕ್ಕೆ ಮುಂದಿನ ಹಂತಗಳಲ್ಲಿ ಅವರೆಲ್ಲರ ಸಹಕಾರದ ಪ್ರಯೋಜನ ಲಭ್ಯವಾಗುತ್ತದೆ. ಈ ಮಧ್ಯೆ ನಮ್ಮ ಮೇಲೆ ಒಂದು ಕರ್ತವ್ಯವನ್ನು ಹೊರಿಸಲಾಗಿದೆ. ಅದೆಂದರೆ, ಗೈರುಹಾಜರಾದವರನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು, ನಾವು ಒಂದು ಪಕ್ಷದ ಅಥವಾ ಒಂದು ಗುಂಪಿನ ಪರವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು, ಬದಲಿಗೆ ಭಾರತವನ್ನು ಒಂದು ಅಖಂಡ ರಾಷ್ಟ್ರವಾಗಿ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಯಾವಾಗಲೂ ಭಾರತದಲ್ಲಿರುವ ನಲವತ್ತು ಕೋಟಿ ಜನರ ಕ್ಷೇಮಾಭಿವೃದ್ಧಿಯನ್ನು ಕುರಿತು ಯೋಚಿಸಬೇಕು. ಇಲ್ಲಿರುವ ನಾವೆಲ್ಲ ಈಗ ನಮ್ಮದೇ ವಲಯಗಳಲ್ಲಿ, ಪಕ್ಷಗಳಲ್ಲಿ, ಒಂದಿಲ್ಲೊಂದು ಗುಂಪಿಗೆ ಸೇರಿದವರಾಗಿದ್ದೇವೆ ಮತ್ತು ಪ್ರಾಯಃ ನಮ್ಮ ನಮ್ಮ ಪಕ್ಷಗಳಲ್ಲಿಯೇ ಕಾರ್ಯನಿರ್ವಹಿಸುತ್ತಾ ಹೋಗುತ್ತೇವೆ. ಅದೇನೇ ಇದ್ದರೂ ಪಕ್ಷ ಮೀರಿ ಮೇಲೇಳುವ, ರಾಷ್ಟ್ರವನ್ನು ಕುರಿತು ಚಿಂತಿಸುವ ಕಾಲ ಬರುತ್ತದೆ. ನಮ್ಮ ರಾಷ್ಟ್ರವು ಒಂದು ವಿಶಾಲ ಭಾಗವಾಗಿರುವ ಸಮಸ್ತ ಜಗತ್ತನ್ನೇ ಕುರಿತು ಕೂಡ ಕೆಲವು ಸಲ ಯೋಚಿಸಬೇಕಾಗುತ್ತದೆ. ಮತ್ತೆ ಈ ಸಂವಿಧಾನ ರಚನಾಸಭೆಯ ಕಾರ್ಯವನ್ನು ಕುರಿತು ಯೋಚಿಸುವಾಗ, ನಮಗೆ ಸಾಧ್ಯವಿರುವಮಟ್ಟಿಗೂ ನಮ್ಮ ಸಾಧಾರಣ ವ್ಯಕ್ತಿತ್ವದಿಂದ ಮತ್ತು ಪಕ್ಷದ ಭಿನ್ನಾಭಿಪ್ರಾಯಗಳಿಂದ ಮೇಲೇಳಬೇಕು ಮತ್ತು ನಮ್ಮ ಮುಂದಿರುವ ಸಮಸ್ಯೆಯನ್ನು ಕುರಿತು ವಿಶಾಲವಾಗಿ, ಅತ್ಯಂತ ಸಹಿಷ್ಣುತೆಯಿಂದ ಮತ್ತು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಯೋಚಿಸಬೇಕು ಎಂದು ನನಗೆ ತೋರುತ್ತದೆ. ನಾವು ಏನನ್ನು ಸೃಷ್ಟಿಸುತ್ತೇವೆಯೋ ಅದು ಸಮಸ್ತ ಭಾರತದ ಘನತೆಗೆ ತಕ್ಕುದಾಗಿರಬೇಕು. ಮತ್ತು ಅದು ಹೇಗಿರಬೇಕೆಂದರೆ ಈ ಮಹೋನ್ನತ ಸಾಹಸದಲ್ಲಿ ನಾವು ಹೇಗೆ ಕಾರ್ಯನಿರ್ವಹಿಸಬೇಕಾಗಿತ್ತೋ ಹಾಗೆ ಕಾರ್ಯನಿರ್ವಹಿಸಿದ್ದೇವೆ ಎಂದು ಜಗತ್ತು ಅದನ್ನು ಗುರುತಿಸಬೇಕು.

ಇಲ್ಲಿ ಉಪಸ್ಥಿತರಿಲ್ಲದ ಇನ್ನೊಬ್ಬರು ವ್ಯಕ್ತಿಯಿದ್ದಾರೆ. ನಮ್ಮಲ್ಲಿ ಬಹಳ ಜನರ ಮನಸ್ಸಿನಲ್ಲಿ ಇಂದು ಅವರಿದ್ದಾರೆ, ಅವರೇ ನಮ್ಮ ಜನರ ಮಹಾನಾಯಕರು, ನಮ್ಮ ರಾಷ್ಟ್ರಪಿತ (ಚಪ್ಪಾಳೆ). ಈ ಸಭೆಗೆ ಮುಂಚೆ ನಡೆದ ಎಲ್ಲ ಸಂಗತಿಗಳಿಗೆ ಮತ್ತು ಪ್ರಾಯಃ ಇದನ್ನು ಅನುಸರಿಸಿ ಬರುವ ಬಹಳಷ್ಟು ಸಂಗತಿಗಳಿಗೆ ಮತ್ತು ಈ ಸಭೆಗೆ ಅವರೇ ವಾಸ್ತುಶಿಲ್ಪಿ. ಅವರು ಇಲ್ಲಿ ಇಲ್ಲ. ಏಕೆಂದರೆ, ಅವರ ಆದರ್ಶಗಳನ್ನು ಅರಸಿಕೊಂಡು

ಭಾರತದ ಅಜ್ಞಾತ ಮೂಲೆಯೊಂದರಲ್ಲಿ ಅವರು ಸತತವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ಚೇತನವು ಈ ಸ್ಥಳದ ಮೇಲೆ ಸುಳಿದಾಡುತ್ತಿದೆ ಮತ್ತು ನಮ್ಮ ಕಾರ್ಯಕ್ಕೆ ಆಶೀರ್ವಾದ ಮಾಡುತ್ತಿದೆ ಎನ್ನುವ ವಿಷಯದಲ್ಲಿ ನನಗೆ ಅನುಮಾನವೇ ಇಲ್ಲ.

ಮಾನ್ಯರೆ, ನಾನು ಇಲ್ಲಿ ನಿಂತಿರುವಂತೆ ನನ್ನ ಸುತ್ತ ಗುಂಪುಗೂಡಿರುವ ಎಲ್ಲ ಸಂಗತಿಗಳ ಭಾರವನ್ನು ನಾನು ಪರಿಭಾವಿಸುತ್ತಿದ್ದೇನೆ. ನಾವು ಒಂದು ಯುಗದ ಕೊನೆಯಲ್ಲಿದ್ದೇವೆ ಮತ್ತು ಪ್ರಾಯಃ ಅತಿ ಶೀಘ್ರವಾಗಿ ಹೊಸದೊಂದು ಯುಗದಲ್ಲಿ ತೊಡಗಿಕೊಳ್ಳುತ್ತಿದ್ದೇವೆ. ನನ್ನ ಮನಸ್ಸು ಭಾರತದ ಭವ್ಯವಾದ ಭೂತಕಾಲದ ಕಡೆಗೆ ಹಿಮ್ಮುಖವಾಗಿ ಸಾಗುತ್ತಿದೆ. ೫೦೦೦ ವರ್ಷಗಳ ಭಾರತದ ಇತಿಹಾಸಕ್ಕೆ ಸಾಗುತ್ತಿದೆ. ಅದರ ಅರುಣೋದಯವನ್ನು ಬಹುತೇಕ ಮಾನವನ ಇತಿಹಾಸದ ಅರುಣೋದಯವೆಂದೇ ಪರಿಗಣಿಸಬಹುದು. ಅಲ್ಲಿನ ಇಂದಿನವರೆಗೂ ಸಾಗಿ ಬಂದಿದೆ. ಭೂತಕಾಲದ ಸಂಗತಿಗಳೆಲ್ಲ ನನ್ನ ಸುತ್ತ ಮುತ್ತುತ್ತವೆ ಮತ್ತು ನನ್ನನ್ನು ಉಲ್ಲಾಸಗೊಳಿಸುತ್ತವೆ, ಅದೇ ಸಮಯದಲ್ಲಿ ಕೆಲಮಟ್ಟಿಗೆ ನನ್ನನ್ನು ಕುಗ್ಗಿಸುತ್ತವೆ. ನಾನು ಆ ಭೂತಕಾಲಕ್ಕೆ ಯೋಗ್ಯನೆ? ಈ ಶಕ್ತಿಯುತವಾದ ಭೂತಕಾಲ ಮತ್ತು ಇನ್ನೂ ಹೆಚ್ಚು ಶಕ್ತಿಯುತವಾದ ಭವಿಷ್ಯದ ನಡುವೆ ಈ ವರ್ತಮಾನವೆಂಬ ಕತ್ತಿಯ ಅಲುಗಿನ ಮೇಲೆ ನಿಂತು ಭವಿಷ್ಯದ ಬಗೆಗೆ, ಮಹಾ ಭವಿಷ್ಯದ ಬಗೆಗೆ ನಾನು ಯೋಚಿಸಿದಾಗ ಸ್ವಲ್ಪಮಟ್ಟಿಗೆ ಕಂಪಿಸುತ್ತೇನೆ ಮತ್ತು ಈ ಮಹಾನ್ ಕಾರ್ಯದಿಂದ ನನ್ನ ಚಿತ್ತಸ್ಥೈರ್ಯ ಕುಂದಿದಂತಾಗುತ್ತದೆ. ಭಾರತದ ಇತಿಹಾಸದ ಒಂದು ವಿಚಿತ್ರ ಕ್ಷಣದಲ್ಲಿ ನಾವು ಇಲ್ಲಿ ಬಂದಿದ್ದೇವೆ. ಹಳೆಯದರಿಂದ ಹೊಸದಕ್ಕೆ ಸ್ಥಿತ್ಯಂತರವಾಗುತ್ತಿರುವ ಈ ಕ್ಷಣದಲ್ಲಿ ಯಾವುದೋ ಒಂದು ಜಾದೂ ಇದೆ ಎಂದು ನನಗೆ ಗೊತ್ತಿಲ್ಲದಿದ್ದರೂ ಅದನ್ನು ನಾನು ಪರಿಭಾವಿಸುತ್ತಿದ್ದೇನೆ. ರಾತ್ರಿ ಕಳೆದು ಬೆಳಕು ಹರಿಯುವಾಗ ನಾವು ನೋಡುವ ವಿಸ್ಮಯವದು. ಆ ಹಗಲು ಮೋಡಗಳಿಂದ ಆವೃತವಾಗಿರಬಹುದು, ಆದರೂ ಹಗಲು ಹಗಲೇ. ಏಕೆಂದರೆ ಮೋಡಗಳು ಚೆದುರಿಹೋಗುತ್ತದೆ. ಮತ್ತೆ ನಾವು ಸೂರ್ಯನನ್ನು ನೋಡಬಹುದು. ಈ ಎಲ್ಲ ಕಾರಣಗಳಿಂದ ಈ ಸದನವನ್ನು ಉದ್ದೇಶಿಸಿ ಮಾತನಾಡಲು ಮತ್ತು ಅದರ ಮುಂದೆ ನನ್ನ ಎಲ್ಲ ವಿಚಾರಗಳನ್ನು ಮಂಡಿಸಲು ನನಗೆ ಸ್ವಲ್ಪ ಕಷ್ಟವಾಗುತ್ತಿದೆ. ಸಾವಿರಾರು ವರ್ಷಗಳ ಈ ದೀರ್ಘ ಪರಂಪರೆಯಲ್ಲಿ ಬಂದು ಹೋಗಿರುವ ಶಕ್ತಿಯುತ ವ್ಯಕ್ತಿಗಳನ್ನು ನಾನು ಕಾಣುತ್ತೇನೆ. ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಪರಿಶ್ರಮಿಸಿದ ನಮ್ಮ ಗೆಳೆಯರ ದೀರ್ಘ ಪರಂಪರೆಯನ್ನೇ ನಾನು ನೋಡುತ್ತೇನೆ. ಈಗ ನಾವು ಗತಿಸಿಹೋಗುತ್ತಿರುವ ಈ ಯುಗದ ಅಂಚಿನಲ್ಲಿ ನಿಂತು ಹೊಸ ಯುಗವನ್ನು ಸ್ವಾಗತಿಸಲು ಪ್ರಯತ್ನಿಸುತ್ತಿದ್ದೇವೆ, ಶ್ರಮಿಸುತ್ತಿದ್ದೇವೆ. ಈ ಸದನವು ಈ ಕ್ಷಣದ ಗಾಂಭೀರ್ಯವನ್ನು ಪರಿಭಾವಿಸುತ್ತದೆ ಎನ್ನುವುದು ನನಗೆ ಖಚಿತವಾಗಿದೆ. ಈ ನಿರ್ಣಯವನ್ನು ಅದರ ಮುಂದೆ ಮಂಡಿಸುವ ಹೆಮ್ಮೆಯ ಸೌಭಾಗ್ಯ ನನಗೆ ಪ್ರಾಪ್ತವಾಗಿದೆ. ಸದನವು ಅದೇ ಗಾಂಭೀರ್ಯದಲ್ಲಿ ಅದನ್ನು ಪರಿಗಣಿಸಲು ಪ್ರಯತ್ನಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಅಪಾರ ಸಂಖ್ಯೆಯ ತಿದ್ದುಪಡಿಗಳು ಸದನದ ಮುಂದೆ ಬರುತ್ತಿವೆ ಎಂದು ನಾನು ಬಲ್ಲೆ. ಅವುಗಳಲ್ಲಿ ಬಹುಪಾಲನ್ನು ನಾನು ನೋಡಿಲ್ಲ. ಈ ಸದನದ ಯಾವುದೇ ಸದಸ್ಯರು ಯಾವುದೇ ತಿದ್ದುಪಡಿಯನ್ನು ಮಂಡಿಸಲು ಈ ಸದನದಲ್ಲಿ ಮುಕ್ತ ಅವಕಾಶವಿದೆ. ಅದನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಸದನಕ್ಕೆ ಬಿಟ್ಟಿದ್ದು. ಆದರೆ ನಾನು ಪೂರ್ಣ ಗೌರವದೊಡನೆ ಸಲಹೆ ನೀಡುವುದೇನೆಂದರೆ, ನಾವು ದೊಡ್ಡ ಸಂಗತಿಗಳನ್ನು ಎದುರಿಸಬೇಕಾಗಿರುವಾಗ ದೊಡ್ಡ ಸಂಗತಿಗಳನ್ನು ಹೇಳಬೇಕಾಗಿರುವಾಗ ಮತ್ತು ದೊಡ್ಡ ಸಂಗತಿಗಳನ್ನು ಮಾಡಬೇಕಾಗಿರುವಾಗ ಸಣ್ಣ ವಿಚಾರಗಳ ಬಗೆಗೆ ತೀರ ತಾಂತ್ರಿಕವಾಗಿರಲು ಮತ್ತು ಕಾನೂನಾತ್ಮಕವಾಗಿರಲು ಇದು ಸಮಯವಲ್ಲ. ಆದ್ದರಿಂದ ಈ ಸದನವು ಈ ನಿರ್ಣಯವನ್ನು ದೊಡ್ಡತನದಲ್ಲಿಯೇ ಪರಿಗಣಿಸುತ್ತದೆ ಮತ್ತು ಶಾಬ್ದಿಕ ಜಗಳಾಟಗಳಲ್ಲಿ ಮತ್ತು ಕಚ್ಚಾಟಗಳಲ್ಲಿ ತನ್ನಲ್ಲೇ ತಾನು ಕಳೆದುಹೋಗಬಾರದೆಂದು ನಾನು ನಿರೀಕ್ಷಿಸುತ್ತೇನೆ.

ಹಿಂದೆ ಆಗಿಹೋದ ಅನೇಕ ಸಂವಿಧಾನ ರಚನಾಸಭೆಗಳನ್ನು ಕುರಿತೂ ನಾನು ಆಲೋಚಿಸುತ್ತೇನೆ. ಅಮೆರಿಕದಂತಹ ಮಹಾನ್ ರಾಷ್ಟ್ರದ ನಿರ್ಮಾಣದಲ್ಲಿ ಆ ರಾಷ್ಟ್ರದ ಪಿತೃಗಳು ಹೇಗೆ ಒಂದೆಡೆ ಸೇರಿ ಒಂದು ಸಂವಿಧಾನವನ್ನು ರೂಪಿಸಿದರು ಮತ್ತು ಅದು ದೀರ್ಘಕಾಲದ, ಒಂದೂವರೆ ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ ಕಾಲದ ಪರೀಕ್ಷೆಯನ್ನು ಗೆದ್ದು ನಿಂತಿದೆ ಮತ್ತು ಆ ಸಂವಿಧಾನವನ್ನು ಆಧರಿಸಿ ನಿರ್ಮಿಸಿದ ರಾಷ್ಟ್ರವು ಒಂದು ಮಹಾನ್ ರಾಷ್ಟ್ರವಾಗಿ ಫಲಿತಗೊಂಡಿದೆ ಎಂಬುದನ್ನೂ ನಾನು ಆಲೋಚಿಸುತ್ತೇನೆ. ೧೫೦ಕ್ಕೂ ಹೆಚ್ಚಿನ ವರ್ಷಗಳ ಹಿಂದೆ ನಡೆದ ಶಕ್ತಿಯುತವಾದ ಆ ಕ್ರಾಂತಿಯ ಕಡೆಗೆ ನನ್ನ ಮನಸ್ಸು ಹಿಂದಕ್ಕೋಡುತ್ತದೆ. ಆ ಲಾವಣ್ಯಪೂರ್ಣ ಸುಂದರ ನಗರ ಪ್ಯಾರಿಸ್‌ನಲ್ಲಿ ಸಭೆ ಸೇರಿದ ಸಂವಿಧಾನ ರಚನಾಸಭೆಯ ಕಡೆಗೆ ಓಡುತ್ತದೆ. ಅದು ಅನೇಕ ಸ್ವಾತಂತ್ರ್ಯ ಹೋರಾಟಗಳನ್ನು ನಡೆಸಿತು. ಆ ಸಂವಿಧಾನ ರಚನಾಸಭೆಯು ಎದುರಿಸಿದ ಕಷ್ಟಗಳ ಕಡೆಗೆ ಮತ್ತು ರಾಜ ಹಾಗೂ ಇತರ ಅಧಿಕಾರಿಗಳು ಹೇಗೆ ಅದಕ್ಕೆ ಅಡಚಣೆಗಳನ್ನು ಒಡ್ಡಿದರೂ ಅದು ಮತ್ತೂ ಮುಂದುವರಿಯಿತು ಎನ್ನುವುದರ ಕಡೆಗೆ ನನ್ನ ಮನಸ್ಸು ಓಡುತ್ತದೆ. ಈ ಸದನವು ನೆನೆಸಿಕೊಳ್ಳಬೇಕಾದುದು ಏನೆಂದರೆ, ಈ ತೊಂದರೆಗಳು ಎದುರಾದಾಗ ಆಗಿನ ಸಂವಿಧಾನ ರಚನಾಸಭೆಗೆ ಸಭೆ ಸೇರಲು ಒಂದು ಕೋಣೆಯನ್ನು ಕೊಡುವುದನ್ನು ಕೂಡ ನಿರಾಕರಿಸಲಾಯಿತು, ಆಗ ಅವರು ಒಂದು ಬಯಲು ಟೆನ್ನಿಸ್ ಕ್ರೀಡಾಂಗಣದಲ್ಲಿ ಸಭೆ ಸೇರಿ ಅಲ್ಲಿಯೇ ಪ್ರತಿಜ್ಞಾವಚನವನ್ನು ತೆಗೆದುಕೊಂಡರು. ಅದನ್ನು 'ಟೆನ್ನಿಸ್ ಕ್ರೀಡಾಂಗಣದ ಪ್ರತಿಜ್ಞಾವಚನ' ಎಂದೇ ಕರೆಯಲಾಗಿದೆ. ರಾಜರು ಮತ್ತು ಇತರರು ಅಡ್ಡಿ ಪಡಿಸಿದರೂ ಅವರು ಸಭೆ ಸೇರುವುದನ್ನು ಮುಂದುವರಿಸಿದರು, ಮತ್ತು ತಾವು ಕೈಗೊಂಡಿದ್ದ ಕಾರ್ಯವನ್ನು ಮುಗಿಸುವ ವರೆಗೂ ಚೆದುರಲಿಲ್ಲ. ಈ ಗಂಭೀರವಾದ ಮನೋಭಾವದಲ್ಲಿಯೇ ನಾವು ಇಲ್ಲಿ ಸೇರಿದ್ದೇವೆ ಎಂದು ಭಾವಿಸುತ್ತೇನೆ. ನಾವು ಈ ಸಭಾಂಗಣದಲ್ಲಿ ಭೇಟಿಯಾಗಲಿ ಅಥವಾ ಇತರ ಸಭಾಂಗಣಗಳಲ್ಲಾಗಲಿ, ಅಥವಾ ಮೈದಾನಗಳಲ್ಲಾಗಲಿ ಅಥವಾ ಮಾರುಕಟ್ಟೆಯಲ್ಲಾಗಲಿ ಸಭೆ ಸೇರುವುದನ್ನು ಮುಂದುವರಿಸುತ್ತೇವೆ ಮತ್ತು ನಮ್ಮ ಕೆಲಸವನ್ನು ಮುಗಿಸುವವರೆಗೂ ನಮ್ಮ ಕಾರ್ಯವನ್ನು ಮುಂದುವರಿಸುತ್ತೇವೆ ಎಂದು ನಾನು ನಂಬಿದ್ದೇನೆ.

ಅನಂತರ ನನ್ನ ಮನಸ್ಸು ಇತ್ತೀಚಿನ ಕ್ರಾಂತಿಯೊಂದರ ಕಡೆಗೆ ಹೋಗುತ್ತದೆ. ಅದು ಹೊಸ ಬಗೆಯ ದೇಶವೊಂದರ ಸೃಷ್ಟಿಗೆ ಕಾರಣವಾಯಿತು. ಅದು ರಷ್ಯಾದಲ್ಲಿ ನಡೆದ ಕ್ರಾಂತಿ. ಅದರಿಂದ 'ಯೂನಿಯನ್ ಆಫ್ ದ ಸೋವಿಯೆಟ್ ಸೋಷಲಿಸ್ಟ್ ರಿಪಬ್ಲಿಕ್ಸ್' ಜನ್ಮತಾಳಿತು. ಅದು ಇನ್ನೊಂದು ಬಲಿಷ್ಠ ರಾಷ್ಟ್ರ. ಅದು ಜಗತ್ತಿನಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಅದು ಒಂದು ಬಲಿಷ್ಠ ರಾಷ್ಟ್ರವಾಗಿರುವುದಷ್ಟೆ ಅಲ್ಲದೆ ಭಾರತದಲ್ಲಿರುವ ನಮಗೆ ಒಂದು ನೆರೆಹೊರೆಯ ರಾಷ್ಟ್ರವೂ ಆಗಿದೆ.

ಹೀಗೆ ನಮ್ಮ ಮನಸ್ಸು ಈ ಮಹಾನ್ ಉದಾಹರಣೆಗಳ ಕಡೆಗೆ ಹಿಂದಕ್ಕೋಡುತ್ತದೆ. ಅವರ ಯಶಸ್ಸುಗಳಿಂದ ಕಲಿಯಲು ಮತ್ತು ಅವರ ಸೋಲುಗಳನ್ನು ನಿವಾರಿಸಲು ನಾವು ಪ್ರಯತ್ನಿಸುತ್ತೇವೆ. ಪ್ರಾಯಃ ಸೋಲುಗಳನ್ನು ನಿವಾರಿಸಲು ನಮಗೆ ಸಾಧ್ಯವಾಗದೇ ಹೋಗಬಹುದು, ಏಕೆಂದರೆ. ಕೆಲಮಟ್ಟಿನ ಸೋಲು ಮಾನವನ ಪ್ರಯತ್ನದಲ್ಲಿ ಅಂತರ್ನಿಹಿತವಾಗಿದೆ. ಅದೇನೇ ಇದ್ದರೂ, ಅಡಚಣೆಗಳು ಮತ್ತು ತೊಂದರೆಗಳು ಇದ್ದರೂ ನಾವು ಮುಂದುವರಿಯುತ್ತೇವೆ ಮತ್ತು ದೀರ್ಘಕಾಲ ನಾವು ಕಾಣುತ್ತಿದ್ದ ಕನಸನ್ನು ಸಾಧಿಸುತ್ತೇವೆ ಹಾಗೂ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೇವೆ ಎಂದು ನನಗೆ ಖಚಿತವಾಗಿದೆ. ಸದನಕ್ಕೆ ತಿಳಿದಿರುವಂತೆ ಅತ್ಯಂತ ಜಾಗರೂಕತೆಯಿಂದ ಒಕ್ಕಣೆ ಮಾಡಲಾಗಿರುವ ಈ ನಿರ್ಣಯದಲ್ಲಿ ತೀರ ಅತಿಯಾಗಿ ಅಥವಾ ತೀರ ಮಿತವಾಗಿ ಹೇಳುವುದನ್ನು ನಾವು ನಿವಾರಿಸಲು ಪ್ರಯತ್ನಿಸಿದ್ದೇವೆ. ಈ ಬಗೆಯ ನಿರ್ಣಯವನ್ನು ರಚಿಸುವುದು ಕಷ್ಟ. ನೀವು ತೀರ ಕಡಿಮೆ ಹೇಳಿದರೆ ಅದು ಕೇವಲ ಒಂದು ಧರ್ಮಶ್ರದ್ಧೆಯ ನಿರ್ಣಯವಾಗುತ್ತದೆಯೇ ವಿನಾ ಬೇರೇನೂ ಅಲ್ಲ. ನೀವು ಅತಿಯಾಗಿ ಹೇಳಿದರೆ ಅದು ಸಂವಿಧಾನವನ್ನು ರಚಿಸಲಿರುವವರ ಕಾರ್ಯಭಾರವನ್ನು ಅತಿಕ್ರಮಿಸುತ್ತದೆ, ಅಂದರೆ ಈ ಸದನದ ಕಾರ್ಯಭಾರವನ್ನು. ಈ ನಿರ್ಣಯವು ನಾವು ರಚಿಸಲಿರುವ

ಸಂವಿಧಾನದ ಒಂದು ಭಾಗವಲ್ಲ ಮತ್ತು ಅದನ್ನು ಹಾಗೆಂದು ನೋಡಬಾರದು ಕೂಡ. ಈ ಸದನವು ಆ ಸಂವಿಧಾನವನ್ನು ರಚಿಸಲು ಪರಿಪೂರ್ಣ ಸ್ವಾತಂತ್ರ್ಯವನ್ನು ಹೊಂದಿದೆ ಮತ್ತು ಈ ಸದನದೊಳಕ್ಕೆ ಬೇರೆಯವರು ಬಂದಾಗ ಆ ಸಂವಿಧಾನವನ್ನು ರೂಪಿಸುವ ಪರಿಪೂರ್ಣ ಸ್ವಾತಂತ್ರ್ಯವೂ ಅವರಿಗಿರುತ್ತದೆ. ಆದ್ದರಿಂದ ಈ ನಿರ್ಣಯವು ಈ ಎರಡು ಅತಿಗಳ ನಡುವೆ ಚುಕ್ಕಾಣಿ ಹಿಡಿಯುತ್ತದೆ ಮತ್ತು ಕೆಲವು ಮೂಲ ನಿಯಮಗಳನ್ನು ರೂಪಿಸುತ್ತಿದೆ. ಇದನ್ನು ಭಾರತದಲ್ಲಿ ಯಾವ ಗುಂಪಾಗಲಿ ಅಥವಾ ಪಕ್ಷವಾಗಲಿ ಮತ್ತು ಯಾವ ಬಿಡಿವ್ಯಕ್ತಿಯೇ ಆಗಲಿ ವಿರೋಧಿಸಲಾರರು ಎಂದು ನಾನು ನಂಬುತ್ತೇನೆ. ಒಂದು ಸ್ವತಂತ್ರವಾದ ಸಾರ್ವಭೌಮ ಭಾರತವನ್ನು ಹೊಂದಬೇಕೆನ್ನುವುದು ನಮ್ಮ ದೃಢವಾದ ಮತ್ತು ವಿದ್ಯುಕ್ತವಾದ ನಿರ್ಧಾರ ಎಂದು ನಾವು ಹೇಳುತ್ತೇವೆ. ಭಾರತವು ಖಂಡಿತವಾಗಿಯೂ ಸಾರ್ವಭೌಮವಾಗುತ್ತದೆ, ಖಂಡಿತವಾಗಿಯೂ ಸ್ವತಂತ್ರವಾಗುತ್ತದೆ ಮತ್ತು ಖಂಡಿತವಾಗಿಯೂ ಒಂದು ಗಣರಾಜ್ಯವಾಗುತ್ತದೆ. ರಾಜಪ್ರಭುತ್ವ ಮತ್ತು ಇತರೆಯವುಗಳನ್ನು ಕುರಿತು ಇರುವ ವಾದಗಳ ಬಗೆಗೆ ನಾನು ಮಾತಾಡುವುದಿಲ್ಲ, ಆದರೆ ಶೂನ್ಯದಿಂದ ಭಾರತದಲ್ಲಿ ನಾವು ರಾಜಪ್ರಭುತ್ವವನ್ನು ಸೃಷ್ಟಿಸಲಾರೆವು ಎನ್ನುವುದು ಸುಸ್ಪಷ್ಟ. ಅದು ಅಲ್ಲಿಲ್ಲ. ಇದು ಒಂದು ಸ್ವತಂತ್ರವಾದ ಮತ್ತು ಸಾರ್ವಭೌಮ ದೇಶವಾಗಬೇಕಾದರೆ ನಾವು ಒಂದು ಬಾಹ್ಯ ರಾಜಪ್ರಭುತ್ವ ಹೊಂದಲಾಗುವುದಿಲ್ಲ, ಮತ್ತು ಯಾವುದೋ ಸ್ಥಳೀಯ ರಾಜಪ್ರಭುತ್ವಗಳಿಗಾಗಿ ನಾವು ಸಂಶೋಧನೆಯನ್ನೂ ಮಾಡಲಾಗುವುದಿಲ್ಲ. ಅನಿವಾರ್ಯವಾಗಿ ಅದು ಒಂದು ಗಣರಾಜ್ಯವೇ ಆಗಬೇಕು. ಈಗ ಕೆಲವು ಸ್ನೇಹಿತರು ಒಂದು ಪ್ರಶ್ನೆಯನ್ನು ಎತ್ತಬಹುದು: " 'ಪ್ರಜಾಸತ್ತಾತ್ಮಕ' ಎಂಬ ಶಬ್ದವನ್ನು ನೀವು ಏಕೆ ಇಲ್ಲಿ ಹಾಕಿಲ್ಲ?" ನಾನು ಅವರಿಗೆ ಹೇಳುತ್ತೇನೆ: ಅದು ಸಹಜವಾಗಿಯೇ ಗ್ರಹಿಸಬಹುದಾದ ಸಂಗತಿ. ಅಂದರೆ ಒಂದು ಗಣರಾಜ್ಯವು ಪ್ರಜಾಸತ್ತಾತ್ಮಕವಾಗಿಲ್ಲದಿರಬಹುದು, ಆದರೆ ನಮ್ಮ ಸಮಸ್ತ ಭೂತಕಾಲವೂ ಸಾಕ್ಷೀಭೂತವಾಗಿರುವ ಸಂಗತಿಯೆಂದರೆ ನಾವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಪರವಾಗಿದ್ದೇವೆ. ಪ್ರಜಾಪ್ರಭುತ್ವದತ್ತ ಮತ್ತು ಪ್ರಜಾಪ್ರಭುತ್ವಕ್ಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲದ ವ್ಯವಸ್ಥೆಯತ್ತ ನಾವು ಗುರಿಯನ್ನಿಟ್ಟುಕೊಂಡಿದ್ದೇವೆ ಎನ್ನುವುದು ಸುಸ್ಪಷ್ಟ. ಯಾವ ರೂಪದ ಪ್ರಜಾಪ್ರಭುತ್ವ, ಯಾವ ಆಕಾರವನ್ನು ಅದು ತಳೆಯುತ್ತದೆ ಎನ್ನುವುದು ಇನ್ನೊಂದು ವಿಷಯ. ಇಂದಿನ ಪ್ರಜಾಪ್ರಭುತ್ವಗಳು, ಅವುಗಳಲ್ಲಿ ಅನೇಕವು ಯೂರೋಪ್ ಮತ್ತು ಬೇರೆಡೆಗಳಲ್ಲಿವೆ, ಜಗತ್ತಿನ ಪ್ರಗತಿಯಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿದೆ. ಆದರೂ ಈ ಪ್ರಜಾಪ್ರಭುತ್ವಗಳು ಸಂಪೂರ್ಣವಾಗಿ ಪ್ರಜಾಸತ್ತಾತ್ಮಕವಾಗಿ ಉಳಿಯಬೇಕೆಂದರೆ ತಮ್ಮ ಸ್ವರೂಪವನ್ನು ಕೆಲಮಟ್ಟಿಗೆ ಬದಲಾಯಿಸಿಕೊಳ್ಳಬೇಕಾಗಿಲ್ಲವೇ ಎನ್ನುವುದು ಅನುಮಾನಾಸ್ಪದವಾಗಿರಬಹುದು. ಪ್ರಜಾಸತ್ತಾತ್ಮಕ ದೇಶ ಎಂದು ಕರೆದುಕೊಳ್ಳುವ ಒಂದು ನಿರ್ದಿಷ್ಟವಾದ ಪ್ರಜಾಸತ್ತಾತ್ಮಕವಾದ ವಿಧಾನ ಅಥವಾ ಒಂದು ಸಂಸ್ಥೆಯನ್ನು ನಾವು ಸುಮ್ಮನೆ ನಕಲು ಮಾಡಲು ಹೋಗುತ್ತಿಲ್ಲ ಎಂದು ನಾನು ನಿರೀಕ್ಷಿಸುತ್ತೇನೆ. ನಾವು ಅದನ್ನು ಇನ್ನಷ್ಟು ಉತ್ತಮ ಪಡಿಸಬಹುದು. ಏನೇ ಆಗಲಿ, ಯಾವುದೇ ವ್ಯವಸ್ಥೆಯ ಸರ್ಕಾರವನ್ನು ನಾವು ಇಲ್ಲಿ ಸ್ಥಾಪಿಸಲಿ ಅದು ನಮ್ಮ ಜನರ ಮನಸ್ಸಿನ ಹದಕ್ಕೆ ಹೊಂದಿಕೊಳ್ಳಬೇಕು ಮತ್ತು ಅವರಿಗೆ ಅಂಗೀಕಾರಾರ್ಹವಾಗಿರಬೇಕು. ನಾವು ಪ್ರಜಾಪ್ರಭುತ್ವದ ಪರವಾಗಿದ್ದೇವೆ. ಆ ಪ್ರಜಾಪ್ರಭುತ್ವಕ್ಕೆ, ಅತ್ಯಂತ ಸಂಪೂರ್ಣವಾದ ಪ್ರಜಾಪ್ರಭುತ್ವಕ್ಕೆ ಯಾವ ಆಕಾರವನ್ನು ಕೊಡಬೇಕು ಎಂದು ನಿರ್ಧರಿಸುವುದು ಈ ಸದನದ ನಿರ್ಧಾರಕ್ಕೆ ಬಿಟ್ಟಿದ್ದು ಎನ್ನವುದು ನನ್ನ ನಿರೀಕ್ಷೆ. ಸದನವು ಇಲ್ಲಿ ಗಮನಿಸಬಹುದಾದ ಸಂಗತಿಯೆಂದರೆ 'ಪ್ರಜಾಸತ್ತಾತ್ಮಕ' ಎಂಬ ಶಬ್ದವನ್ನು ನಾವು ಬಳಸಿಲ್ಲ. ಏಕೆಂದರೆ 'ಗಣರಾಜ್ಯ' ಎಂಬ ಶಬ್ದವು ಆ ಶಬ್ದವನ್ನು ಒಳಗೊಳ್ಳುತ್ತದೆ ಎನ್ನುವುದು ಸುಸ್ಪಷ್ಟ. ನಾವು ಅನಗತ್ಯವಾದ ಮತ್ತು ಆವಶ್ಯಕತೆಗಿಂತ ಹೆಚ್ಚಿನ ಶಬ್ದಗಳನ್ನು ಬಳಸಲು ಇಷ್ಟಪಡಲಿಲ್ಲ. ಇಷ್ಟಾದರೂ ನಾವು ಆ ಶಬ್ದವನ್ನು ಬಳಸುವುದಕ್ಕಿಂತ ತೀರ ಹೆಚ್ಚಿನದನ್ನು ಸಾಧಿಸಿದ್ದೇವೆ. ನಾವು ಈ ನಿರ್ಣಯದಲ್ಲಿ ಪ್ರಜಾಪ್ರಭುತ್ವದ ಸಾರವನ್ನು ನೀಡಿದ್ದೇವೆ. ಅದು ಪ್ರಜಾಪ್ರಭುತ್ವದ ಸಾರವಷ್ಟೇ ಅಲ್ಲ ಆರ್ಥಿಕ ಪ್ರಜಾಪ್ರಭುತ್ವದ ಸಾರವನ್ನು ಕೂಡ ಈ ನಿರ್ಣಯದಲ್ಲಿ ಕೊಟ್ಟಿದ್ದೇವೆ ಎಂದು ನಾನು ಹೇಳಬಹುದೇನೋ.

ಇದು ಒಂದು ಸಮಾಜವಾದಿ ದೇಶವಾಗಿರಬೇಕು ಎಂದು ನಾವು ಹೇಳಿಲ್ಲ ಎಂಬ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಇತರರು ಈ ನಿರ್ಣಯದ ಮೇಲೆ ಆಕ್ಷೇಪವನ್ನೆತ್ತಬಹುದು. ನಾನು ಸಮಾಜವಾದದ ಪರವಾಗಿದ್ದೇನೆ ಮತ್ತು ಭಾರತವು ಸಮಾಜವಾದದ ಪರವಾಗಿರುತ್ತದೆ ಎಂದು ನಾನು ಆಶಿಸುತ್ತೇನೆ ಮತ್ತು ಭಾರತವು ಸಮಾಜವಾದಿ ದೇಶದ ಸಂವಿಧಾನದತ್ತ ಸಾಗುತ್ತದೆ ಮತ್ತು ಇಡೀ ಜಗತ್ತೇ ಆ ದಾರಿಯಲ್ಲಿ ಹೋಗಬೇಕು ಎಂದು ನಾನು ನಂಬುತ್ತೇನೆ. ಮತ್ತೆ ಯಾವ ಸ್ವರೂಪದ ಸಮಾಜವಾದ ಎನ್ನುವುದು ನಿಮ್ಮ ಪರಿಗಣನೆಗಿರುವ ಇನ್ನೊಂದೇ ಸಂಗತಿ. ಮುಖ್ಯವಾದ ಸಂಗತಿ ಏನೆಂದರೆ, ನನ್ನದೇ ಅಪೇಕ್ಷೆಯ ಮೇರೆಗೆ 'ನಮಗೆ ಸಮಾಜವಾದಿ ದೇಶ ಬೇಕು', ಎಂದು ನಾನು ಸೇರಿಸಿದ್ದಿದ್ದಲ್ಲಿ ಅದು ಕೆಲವರಿಗೆ ಒಪ್ಪಿಗೆಯಾಗಬಹುದಿತ್ತು ಮತ್ತು ಇನ್ನು ಕೆಲವರಿಗೆ ಒಪ್ಪಿಗೆಯಾಗದೇ ಇರಬಹುದಾಗಿತ್ತು ಮತ್ತು ಇಂತಹ ವಿಚಾರಗಳಲ್ಲಿ ಈ ನಿರ್ಣಯವು ವಿವಾದಾಸ್ಪದವಾಗಬಾರದು ಎನ್ನುವುದು ನಮ್ಮ ಇಚ್ಛೆಯಾಗಿತ್ತು. ಆದ್ದರಿಂದ ನಾವು ಸೈದ್ಧಾಂತಿಕ ಶಬ್ದಗಳನ್ನು ಮತ್ತು ಸೂತ್ರಗಳನ್ನು ಇಲ್ಲಿ ರಚಿಸಿಲ್ಲ, ಬದಲಿಗೆ ನಾವು ಅಪೇಕ್ಷಿಸುವ ವಿಷಯದ ಸಾರವನ್ನು ಇರಿಸಿದ್ದೇವೆ. ಇದು ಮುಖ್ಯವಾದದ್ದು ಮತ್ತು ಈ ವಿಚಾರವಾಗಿ ಯಾವುದೇ ವಿರೋಧ ಇರಲಾರದು. ಕೆಲವು ಜನರು ನನಗೆ ತೋರಿಸಿಕೊಟ್ಟ ಸಂಗತಿಯೇನೆಂದರೆ, ಗಣರಾಜ್ಯ ಎಂದು ನಾವು ಪ್ರಸ್ತಾವ ಮಾಡಿರುವುದು ಕೆಲಮಟ್ಟಿಗೆ ಪ್ರಾಂತ್ಯಗಳನ್ನು ಆಳುತ್ತಿರುವವರಿಗೆ ಅಸಂತೋಷವನ್ನು ಉಂಟುಮಾಡಬಹುದು. ಇದು ಅವರಿಗೆ ಅಸಂತೋಷವನ್ನು ಉಂಟುಮಾಡುವುದು ಸಂಭವನೀಯವೇ.

ಆದರೆ ವೈಯಕ್ತಿಕವಾಗಿ ನಾನು ಸ್ಪಷ್ಟಪಡಿಸಲು ಬಯಸುವುದು ಮತ್ತು ಈ ಸದನವು ತಿಳಿದಿರುವುದು ಏನೆಂದರೆ, ಎಲ್ಲಿಯೂ ಕೂಡ ರಾಜಪ್ರಭುತ್ವ ಎಂಬ ವ್ಯವಸ್ಥೆಯು ಇರಬೇಕೆಂಬುದರಲ್ಲಿ ನನಗೆ ನಂಬಿಕೆ ಇಲ್ಲ, ಮತ್ತು ಇಂದು ಜಗತ್ತಿನಲ್ಲಿ ರಾಜಪ್ರಭುತ್ವವು ಕ್ಷಿಪ್ರವಾಗಿ ಕಣ್ಮರೆಯಾಗುತ್ತಿರುವ ವ್ಯವಸ್ಥೆಯಾಗಿದೆ. ಅದೇನೇ ಇದ್ದರೂ ಈ ವಿಚಾರವಾಗಿ ನನ್ನ ವೈಯಕ್ತಿಕ ನಂಬಿಕೆ ಎನ್ನುವ ಪ್ರಶ್ನೆಯು ಅಲ್ಲ. ಅನೇಕ ವರ್ಷಗಳಿಂದ ಈ ಭಾರತೀಯ ಪ್ರಾಂತ್ಯಗಳನ್ನು ಕುರಿತ ನಮ್ಮ ಅಭಿಪ್ರಾಯವು ಏನಾಗಿದೆಯೆಂದರೆ, ಮೊಟ್ಟಮೊದಲನೆಯದಾಗಿ ಆ ಪ್ರಾಂತ್ಯಗಳ ಜನರು ಬರಲಿರುವ ಸ್ವಾತಂತ್ರ್ಯದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಬೇಕು. ಪ್ರಾಂತ್ಯಗಳಲ್ಲಿರುವ ಜನರು ಮತ್ತು ಪ್ರಾಂತ್ಯಗಳ ಹೊರಗಿರುವ ಜನರ ನಡುವೆ ವಿವಿಧ ಮಾನಕ ಮತ್ತು ದರ್ಜೆಗಳ ಸ್ವಾತಂತ್ರ್ಯವಿರಬೇಕೆನ್ನುವುದು ನನಗೆ ತೀರ ಕಲ್ಪನಾತೀತವಾದದ್ದು. ಈ ಪ್ರಾಂತ್ಯಗಳು ಆ ಒಕ್ಕೂಟದ ಭಾಗಗಳಾಗಿ ಯಾವ ರೀತಿಯಲ್ಲಿ ಇರುತ್ತವೆ ಎಂಬುದನ್ನು ಆ ಪ್ರಾಂತ್ಯಗಳ ಪ್ರತಿನಿಧಿಗಳೊಡನೆ ಪರಿಗಣಿಸುವುದು ಈ ಸದನಕ್ಕೆ ಬಿಟ್ಟ ವಿಷಯ. ಮತ್ತು ಈ ಪ್ರಾಂತ್ಯಗಳನ್ನು ಕುರಿತಂತೆ ಎಲ್ಲ ವಿಷಯಗಳ ಬಗೆಗೆ ಆಯಾ ಪ್ರಾಂತ್ಯಗಳ ನಿಜವಾದ ಪ್ರತಿನಿಧಿಗಳೊಡನೆ ಈ ಸದನವು ವ್ಯವಹರಿಸುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ. ರಾಜರು ಅಥವಾ ಅವರ ಪ್ರತಿನಿಧಿಗಳೊಡನೆ ಅವರಿಗೆ ಸಂಬಂಧಪಟ್ಟ ವಿಚಾರಗಳ ಬಗೆಗೆ ವ್ಯವಹರಿಸಲು ನಾವು ಪರಿಪೂರ್ಣವಾಗಿ ಸಮ್ಮತಿಸಿದ್ದೇವೆ ಎಂದು ನಾನು ಭಾವಿಸುತ್ತೇನೆ. ಆದರೆ ಅಂತಿಮವಾಗಿ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸಿದಾಗ, ಭಾರತದ ಇತರ ಭಾಗಗಳಲ್ಲಿ ಇರುವಂತೆಯೇ ಪ್ರಾಂತ್ಯಗಳ ಜನರ ಪ್ರತಿನಿಧಿಗಳ ಮೂಲಕ ಅದು ಇರಬೇಕು. ಅಂಥವರು ಇಲ್ಲಿ ಉಪಸ್ಥಿತರಾಗಿದ್ದಾರೆ (ಚಪ್ಪಾಳೆ). ಯಾವುದೇ ಸಂದರ್ಭದಲ್ಲಿ ನಾವು ರೂಪಿಸಬಹುದಾದದ್ದು ಅಥವಾ ಒಪ್ಪಿಕೊಳ್ಳಬಹುದಾದದ್ದು ಏನೆಂದರೆ ಸ್ವಾತಂತ್ರ್ಯದ ಪರಿಮಾಣವು ಪ್ರಾಂತ್ಯಗಳಲ್ಲಿ ಹೇಗೋ ಬೇರೆಡೆಗಳಲ್ಲಿಯೂ ಹಾಗೇ ಸಮಾನವಾಗಿ ಇರಬೇಕು. ಸರ್ಕಾರದ ಸಲಕರಣೆ ಮತ್ತು ಸಾಧನೋಪಾಯಗಳಲ್ಲಿ ಕೂಡ ಸಮಾನತೆಯ ಪರಿಮಾಣವು ಇರಬೇಕು ಎನ್ನುವುದು ಒಂದು ಸಾಧ್ಯತೆ ಮತ್ತು ನನ್ನ ವೈಯಕ್ತಿಕ ಇಚ್ಛೆ. ಅದೇನೇ ಇದ್ದರೂ, ಪ್ರಾಂತ್ಯಗಳೊಡನೆ ಸಹಕಾರ ಮತ್ತು ಸಮಾಲೋಚನೆಗಳಲ್ಲಿ ಪರಿಗಣಿಸಬೇಕಾದ ಸಂಗತಿ ಇದಾಗಿದೆ. ಪ್ರಾಂತ್ಯಗಳ ಮೇಲೆ ಅವುಗಳ ಇಚ್ಛೆಗೆ ವಿರುದ್ಧವಾಗಿ ಏನನ್ನೂ ಹೇರಲು ಈ ಸಂವಿಧಾನ ರಚನಾಮಂಡಲಿಯು ಇಷ್ಟ ಪಡುವುದಿಲ್ಲ ಎಂದು ನಾನು ಊಹಿಸುತ್ತೇನೆ.

ಹಾಗೆ ಹೇರಲು ನಾನು ಕೂಡ ಇಷ್ಟ ಪಡುವುದಿಲ್ಲ. ಒಂದು ನಿರ್ದಿಷ್ಟವಾದ ಪ್ರಾಂತ್ಯದ ಜನರು ಒಂದು ನಿರ್ದಿಷ್ಟವಾದ ಆಡಳಿತ ವಿಧಾನವನ್ನು ಬಯಸಿದರೆ, ಅದು ರಾಜಪ್ರಭುತ್ವವಾಗಿದ್ದರೂ ಕೂಡ ಅದನ್ನು ಇಟ್ಟುಕೊಳ್ಳಲು ಅವರು ಮುಕ್ತರಾಗಿದ್ದಾರೆ. ಇಂದಿನ ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್‌ನಲ್ಲಿ ಐರ್ ಒಂದು ಗಣರಾಜ್ಯವಾಗಿದ್ದರೂ ಅನೇಕ ರೀತಿಗಳಲ್ಲಿ ಅದು ಬ್ರಿಟಿಷ್ ಕಾಮನ್‌ವೆಲ್ತ್‌ನ ಒಂದು ಸದಸ್ಯನಾಗಿಯೇ ಇದೆ ಎನ್ನುವುದನ್ನು ಈ ಸದನವು ನೆನಪಿಸಿಕೊಳ್ಳಬೇಕು. ಹೀಗೆ ಅದು ಊಹಿಸಬಹುದಾದ ಒಂದು ಸಂಗತಿ. ಏನು ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಭಾಗಶಃ ಈ ಸದನ ಮತ್ತು ಭಾಗಶಃ ಇತರರು ನಿರ್ಧರಿಸಬೇಕಾದ ಸಂಗತಿ ಅದು. ಪ್ರಾಂತ್ಯಗಳಲ್ಲಿ ಒಂದು ಖಚಿತವಾದ ಆಡಳಿತದ ರೂಪವು ಇರುವುದರಲ್ಲಿ ಯಾವುದೇ ಅಸಾಮಂಜಸ್ಯವಾಗಲಿ ಅಥವಾ ಅಸಾಧ್ಯತೆಯಾಗಲಿ ಇಲ್ಲ–ಅಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯ ಮತ್ತು ಜವಾಬ್ದಾರಿಯುತವಾದ ಸರ್ಕಾರ ಇದ್ದ ಪಕ್ಷದಲ್ಲಿ ಮತ್ತು ಜನರು ವಾಸ್ತವವಾಗಿಯೂ ಹೊಣೆ ಹೊತ್ತಿದ್ದ ಪಕ್ಷದಲ್ಲಿ. ಒಂದು ನಿರ್ದಿಷ್ಟವಾದ ರಾಜ್ಯದ ಜನರು ರಾಜಪ್ರಭುತ್ವದ ಅಧ್ಯಕ್ಷರನ್ನು ಅಂಗೀಕರಿಸಿದ್ದರೆ, ನಾನು ಅದನ್ನು ಇಷ್ಟಪಡಲಿ ಅಥವಾ ಇಲ್ಲದಿರಲಿ, ನಾನು ಖಂಡಿತವಾಗಿಯೂ ಹಸ್ತಕ್ಷೇಪ ಮಾಡಲು ಇಷ್ಟಪಡುವುದಿಲ್ಲ. ಆದ್ದರಿಂದ ನಾನು ಸ್ಪಷ್ಟಪಡಿಸಲು ಬಯಸುವುದೇನೆಂದರೆ ಈ ನಿರ್ಣಯ ಅಥವಾ ಘೋಷಣೆಗೆ ಸಂಬಂಧಪಟ್ಟಂತೆ, ಈ ಸಂವಿಧಾನ ರಚನಾಸಭೆಯು ಭವಿಷ್ಯದಲ್ಲಿ ಮಾಡಬಹುದಾದ ಯಾವುದೇ ಕಾರ್ಯದೊಡನೆ ಮತ್ತು ಅದು ಕೈಗೊಳ್ಳಬಹುದಾದ ಯಾವುದೇ ಭಾವೀ ಸಂಧಾನಗಳೊಡನೆ ಅದು ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಒಂದೇ ಒಂದು ಅರ್ಥದಲ್ಲಿ, ನೀವು ಹಾಗೆ ಕರೆಯಬಹುದಾದರೆ, ಅದು ನಮ್ಮ ಕೆಲಸವನ್ನು ಮಿತಿಗೊಳಿಸುತ್ತದೆ; ಅದನ್ನು ನೀವು ಮಿತಿ ಅನ್ನಬಹುದಾದರೆ; ಅಂದರೆ, ಘೋಷಣೆಯಲ್ಲಿ ನಿರೂಪಿಸಿರುವಂತೆ ನಾವು ಕೆಲವು ಮೂಲಭೂತ ಪ್ರತಿಪಾದನೆಗಳಿಗೆ ನಿಷ್ಠರಾಗಿರುತ್ತೇವೆ. ಆ ಮೂಲ ಪ್ರತಿಪಾದನೆಗಳು ಅಕ್ಷರಶಃ ವಿವಾದಾತ್ಮಕವಾದವುಗಳಲ್ಲ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಭಾರತದಲ್ಲಿ ಯಾರೂ ಅವುಗಳಿಗೆ ಸವಾಲು ಹಾಕುವುದಿಲ್ಲ ಮತ್ತು ಯಾರೂ ಅವುಗಳಿಗೆ ಸವಾಲು ಹಾಕಕೂಡದು. ಯಾರಾದರೂ ಸವಾಲು ಹಾಕಿದರೆ ನಾವು ಆ ಸವಾಲನ್ನು ಸ್ವೀಕರಿಸುತ್ತೇವೆ ಮತ್ತು ನಮ್ಮ ನಿಲುವಿಗೆ ಬದ್ಧರಾಗಿ ನಿಲ್ಲುತ್ತೇವೆ (ಚಪ್ಪಾಳೆ).

ಮಾನ್ಯರೆ, ನಾವು ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸಲು ಹೊರಡುತ್ತಿದ್ದೇವೆ. ಭಾರತದಲ್ಲಿ ನಾವು ಏನು ಮಾಡಲಿದ್ದೇವೆಯೋ ಅದು ಉಳಿದ ಜಗತ್ತಿನ ಮೇಲೆ ಒಂದು ಶಕ್ತಿಶಾಲಿಯಾದ ಪರಿಣಾಮವನ್ನು ಬೀರುತ್ತದೆ ಎನ್ನುವುದು ಸ್ಪಷ್ಟ. ಜಗತ್ತಿನ ಅಖಾಡದಲ್ಲಿ ಹೊಸದೊಂದು ಸ್ವತಂತ್ರ ರಾಷ್ಟ್ರ ಹೊರಹೊಮ್ಮುತ್ತಿದೆ ಎಂಬ ಕಾರಣಕ್ಕಷ್ಟೇ ಅಲ್ಲ, ಅದರ ವೈಶಾಲ್ಯ ಮತ್ತು ಜನಸಂಖ್ಯೆಯಿಂದಷ್ಟೇ ಅಲ್ಲ, ಅದರ ಅಗಾಧವಾದ ಸಂಪನ್ಮೂಲಗಳು ಮತ್ತು ಈ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅದರ ಸಾಮರ್ಥ್ಯಗಳ ಕಾರಣದಿಂದಾಗಿ ಜಾಗತಿಕ ವಿದ್ಯಮಾನಗಳಲ್ಲಿ ಅದು ತತ್‌ಕ್ಷಣವೇ ಒಂದು ಪ್ರಮುಖವಾದ ಮತ್ತು ಜೀವಧಾರಕವಾದ ಪಾತ್ರವನ್ನು ವಹಿಸಬಹುದಾದ ಗುಣಗಳನ್ನು ಹೊಂದಿದೆ ಎಂಬ ವಾಸ್ತವಾಂಶದ ಕಾರಣದಿಂದಾಗಿ. ಇಂದು ಕೂಡ, ಸ್ವಾತಂತ್ರ್ಯದ ಅಂಚಿನಲ್ಲಿ ಇಂದು ನಾವು ಇರುವ ರೀತಿಯಲ್ಲಿ, ಜಗತ್ತಿನ ವಿದ್ಯಮಾನಗಳಲ್ಲಿ ಭಾರತವು ಒಂದು ಪ್ರಮುಖ ಪಾತ್ರವನ್ನು ವಹಿಸಲು ಪ್ರಾರಂಭಿಸಿದೆ. ಆದ್ದರಿಂದ, ನಮ್ಮ ಸಂವಿಧಾನವನ್ನು ರಚಿಸುವವರು ಈ ವಿಶಾಲವಾದ ಅಂತಾರಾಷ್ಟ್ರೀಯ ಅಂಶವನ್ನು ಸದಾ ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು.

ನಾವು ಈ ಜಗತ್ತನ್ನು ಸ್ನೇಹಪೂರ್ಣವಾಗಿ ಸಮೀಪಿಸುತ್ತಿದ್ದೇವೆ. ಎಲ್ಲ ದೇಶಗಳೊಡನೆಯೂ ನಾವು ಸ್ನೇಹದಿಂದಿರಲು ಬಯಸುತ್ತೇವೆ. ಇಂಗ್ಲೆಂಡಿನೊಡನೆ ಕೂಡ, ಭೂತಕಾಲದಲ್ಲಿ ದೀರ್ಘವಾದ ಸಂಘರ್ಷದ ಇತಿಹಾಸವಿದ್ದರೂ ನಾವು ಸ್ನೇಹದಿಂದಿರಲು ಬಯಸುತ್ತೇವೆ. ಇತ್ತೀಚೆಗೆ ನಾನು ಇಂಗ್ಲೆಂಡಿಗೆ ಭೇಟಿ ಕೊಟ್ಟಿದ್ದೆ ಎನ್ನುವುದು ಈ ಸದನಕ್ಕೆ ಗೊತ್ತು. ಹೋಗಲು ನನಗೆ ಇಷ್ಟವಿರಲಿಲ್ಲ. ಯಾವ ಕಾರಣಗಳಿಗಾಗಿ ಎಂದು ಈ

ಸದನಕ್ಕೆ ಚೆನ್ನಾಗಿ ಗೊತ್ತು. ಆದರೆ ಗ್ರೇಟ್ ಬ್ರಿಟನ್ನಿನ ಪ್ರಧಾನ ಮಂತ್ರಿಗಳ ವೈಯಕ್ತಿಕ ಕೋರಿಕೆಯ ಕಾರಣದಿಂದಾಗಿ ನಾನು ಹೋಗಿದ್ದೆ. ಹೀಗೆ ನಾನು ಹೋದೆ ಮತ್ತು ಎಲ್ಲ ಕಡೆಯೂ ನನ್ನೊಡನೆ ಸೌಜನ್ಯದಿಂದ ನಡೆದುಕೊಂಡರು. ಆದರೂ ಜಗತ್ತಿನ ಎಲ್ಲೆಡೆಗಳಿಂದ ಮತ್ತು ಹೆಚ್ಚು ವಿಶೇಷವಾಗಿ ಇಂಗ್ಲೆಂಡಿನಿಂದ ಹರ್ಷೋದ್ಗಾರ, ಸ್ನೇಹ ಮತ್ತು ಸಹಕಾರದ ಸಂದೇಶಗಳನ್ನು ನಾವು ಬಯಸಿದ ಮತ್ತು ಅವುಗಳಿಗಾಗಿ ಹಾತೊರೆದ ಭಾರತದ ಇತಿಹಾಸದ ಈ ಮಾನಸಿಕವಾದ ಕ್ಷಣದಲ್ಲಿ, ನಮ್ಮ ನಡುವಣ ಹಿಂದಿನ ಸಂಪರ್ಕ ಮತ್ತು ಸಂಘರ್ಷದ ಕಾರಣದಿಂದಾಗಿ, ದುರದೃಷ್ಟವಶಾತ್, ಯಾವುದೇ ಹರ್ಷೋದ್ಗಾರದ ಸಂದೇಶವಿಲ್ಲದೆ, ಬದಲಿಗೆ ಅಪಾರ ಪ್ರಮಾಣದ ಆಶಾಭಂಗದೊಡನೆ ನಾನು ಮರಳಿ ಬಂದೆ. ಎಲ್ಲರಿಗೂ ತಿಳಿದಿರುವಂತೆ, ಉದ್ಭವಿಸಿರುವ ಹೊಸ ತೊಂದರೆಗಳಿಗೆ ಕಾರಣ ಬ್ರಿಟಿಷ್ ಮಂತ್ರಿಮಂಡಲ ಮತ್ತು ಅಲ್ಲಿ ಅಧಿಕಾರದಲ್ಲಿರುವ ಇತರರು ಇತ್ತೀಚೆಗೆ ನೀಡಿದ ಹೇಳಿಕೆಗಳು. ಅವು ನಮ್ಮ ದಾರಿಯಲ್ಲಿ ಅಡ್ಡಬರುವುದಿಲ್ಲ ಮತ್ತು ಇಲ್ಲಿರುವ ನಮ್ಮೆಲ್ಲರ ಮತ್ತು ಇಲ್ಲಿಗೆ ಬಂದಿಲ್ಲದವರ ಸಹಕಾರದಿಂದ ನಾವು ಮುಂದೆ ಹೆಜ್ಜೆ ಹಾಕುವಲ್ಲಿ ಯಶಸ್ವಿಯಾಗುತ್ತೇವೆ ಎಂದು ನಾನು ನಿರೀಕ್ಷಿಸುತ್ತೇನೆ. ನಾವು ಮುಂದು ಮುಂದಕ್ಕೆ ದಾಪುಗಾಲು ಹಾಕುತ್ತಿರುವ ಕ್ಷಣದಲ್ಲಿ ನಮ್ಮ ದಾರಿಯಲ್ಲಿ ಅಡಚಣೆಗಳನ್ನು ಒಡ್ಡಲಾಗುತ್ತಿದೆ, ಹಿಂದೆ ಪ್ರಸ್ತಾವಿಸಿಲ್ಲದ ನಿರ್ಬಂಧಗಳನ್ನು ಹೊಸದಾಗಿ ಪ್ರಸ್ತಾವಿಸಲಾಗುತ್ತಿದೆ ಮತ್ತು ಹೊಸ ವಿಧಾನಗಳ ಕ್ರಮಗಳನ್ನು ಸೂಚಿಸಲಾಗುತ್ತಿದೆ. ಇದು ನನ್ನ ಪಾಲಿಗೆ ದೊಡ್ಡ ಆಘಾತ. ಅದು ನನಗೆ ನೋವುಂಟುಮಾಡುತ್ತಿದೆ. ನಾನು ಯಾವ ವ್ಯಕ್ತಿಯ ಪ್ರಾಮಾಣಿಕತೆಯನ್ನೂ ಪ್ರಶ್ನಿಸಲು ಇಷ್ಟ ಪಡುವುದಿಲ್ಲ. ಆದರೆ ನಾನು ಹೇಳಲು ಬಯಸುವುದೇನೆಂದರೆ, ಒಂದು ವಿಷಯದ ಕಾನೂನಿನ ಅಂಶ ಏನಾದರಾಗಿರಲಿ, ಸ್ವಾತಂತ್ರ್ಯದ ಬಗೆಗೆ ತೀವ್ರವಾದ ಬಯಕೆಯಿಂದ ತುಂಬಿರುವ ಒಂದು ರಾಷ್ಟ್ರದೊಡನೆ ನಾವು ವ್ಯವಹರಿಸುವಾಗ ಕಾನೂನು ಎನ್ನುವುದು ನಾವು ಅವಲಂಬಿಸಲಾಗದ ಬಹಳ ದುರ್ಬಲವಾದ ಒಂದು ಜೊಂಡಿನ ಹಾಗಿರುತ್ತದೆ. ಇಲ್ಲಿರುವ ನಮ್ಮಲ್ಲಿ ಬಹುಪಾಲು ಜನ ಕಳೆದ ಅನೇಕ ವರ್ಷಗಳಿಂದ, ಒಂದು ತಲೆಮಾರು ಅಥವಾ ಇನ್ನೂ ಹೆಚ್ಚು ಕಾಲದಿಂದ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದೇವೆ. ನಾವು ದಾರುಣವಾದ ದುಃಖವನ್ನು ಹಾದು ಬಂದಿದ್ದೇವೆ. ಅದು ನಮಗೆ ಅಭ್ಯಾಸವಾಗಿದೆ. ಅಗತ್ಯಬಿದ್ದರೆ ಮತ್ತೆ ನಾವು ಅದರಲ್ಲಿ ಹಾದು ಹೋಗುತ್ತೇವೆ. (ಕೇಳಿ, ಕೇಳಿ). ಅದೇನೇ ಇದ್ದರೂ ಈ ದೀರ್ಘ ಅವಧಿಯುದ್ದಕ್ಕೂ ಕೇವಲ ಹೋರಾಟವಷ್ಟೇ ಅಲ್ಲ, ಕೇವಲ ನಾಶವಾಗುವುದಷ್ಟೇ ಅಲ್ಲ, ಬದಲಿಗೆ ರಚಿಸುವ ಮತ್ತು ಸೃಷ್ಟಿಸುವ ಕಾಲ ಯಾವಾಗ ಬರುತ್ತದೆಂದು ಯೋಚಿಸಿದ್ದೇವೆ. ಈಗ ಮುಕ್ತವಾದ ಭಾರತದಲ್ಲಿ ರಚನಾತ್ಮಕವಾದ ಪ್ರಯತ್ನವನ್ನು ಮಾಡುವ ಕಾಲ ಸನ್ನಿಹಿತವಾಗುತ್ತಿರುವಂತೆ ತೋರುತ್ತಿರುವಾಗ ಮತ್ತು ಅದನ್ನು ನಾವು ಸಂತೋಷದಿಂದ ನಿರೀಕ್ಷಿಸುತ್ತಿರುವಾಗ, ಅಂತಹ ಕ್ಷಣದಲ್ಲಿ ನಮ್ಮ ದಾರಿಗೆ ಅಡ್ಡಲಾಗಿ ಹೊಸ ತೊಂದರೆಗಳನ್ನು ಇರಿಸಲಾಗಿದೆ. ಇವೆಲ್ಲದರ ಹಿಂದೆ ಯಾವ ಶಕ್ತಿಯೇ ಇರಲಿ ಸಮರ್ಥರಾದ, ಚತುರರಾದ ಮತ್ತು ಬಹಳ ಬುದ್ಧಿವಂತರಾದ ಜನರಿಗೆ ಮಹಾನ್ ಅಧಿಕಾರ ಸ್ಥಾನಗಳಲ್ಲಿರುವವರಿಗೆ ಕಡ್ಡಾಯವಾಗಿ ಇರಬೇಕಾದ ದಿಟ್ಟವಾದ ಕಲ್ಪನಾಶೀಲತೆಯು ಹೇಗೋ ಕೊರತೆಯಾಗಿದೆ ಎಂದು ಇದು ತೋರಿಸುತ್ತದೆ. ಏಕೆಂದರೆ, ನೀವು ಯಾರಾದರೂ ಜನರೊಂದಿಗೆ ವ್ಯವಹರಿಸಬೇಕೆಂದರೆ, ನೀವು ಅವರನ್ನು ಕಲ್ಪನಾತ್ಮಕವಾಗಿ ಅರ್ಥಮಾಡಿಕೊಳ್ಳಬೇಕು; ನೀವು ಅವರನ್ನು ಭಾವನಾತ್ಮಕವಾಗಿ ಅರ್ಥಮಾಡಿಕೊಳ್ಳಬೇಕು; ಮತ್ತು ಸಹಜವಾಗಿಯೇ ಬೌದ್ಧಿಕವಾಗಿಯೂ ನೀವು ಅವರನ್ನು ಅರ್ಥಮಾಡಿಕೊಳ್ಳಬೇಕು. ನಾವು ಹಿಂದಿನವರಿಂದ ಪರಂಪರೆಯಾಗಿ ಪಡೆದ ದುರದೃಷ್ಟಕರ ಸ್ವತ್ತುಗಳಲ್ಲಿ ಒಂದು ಎಂದರೆ ಭಾರತೀಯ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕಲ್ಪನೆಯಿಲ್ಲದಿರುವುದು. ಭಾರತವು ಇಂದು ರಚನೆಯಾಗಿರುವ ರೀತಿಯಲ್ಲಿ ಯಾರ ಸಲಹೆಯನ್ನೂ ಬಯಸುತ್ತಿಲ್ಲ ಮತ್ತು ಅದರ ಮೇಲೆ ಯಾರ ಹೇರಿಕೆಯನ್ನೂ ಬಯಸುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳದೆ ಜನರು ಅನೇಕಬಾರಿ ನಮಗೆ ಸಲಹೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಅಥವಾ ಸಲಹೆ ಕೊಡುವ ಸ್ವಾತಂತ್ರ್ಯವನ್ನು ವಹಿಸಿದ್ದಾರೆ. ಭಾರತದ ಮೇಲೆ

ಪ್ರಭಾವ ಬೀರುವ ಏಕಮೇವ ಮಾರ್ಗವೆಂದರೆ ಸ್ನೇಹದ ಮೂಲಕ ಮತ್ತು ಸಹಕಾರದ ಮೂಲಕ ಮತ್ತು ಸದ್ಭಾವನೆಯ ಮೂಲಕ. ಬಲಾತ್ಕಾರವಾಗಿ ಹೇರುವ ಯಾವುದೇ ಪ್ರಯತ್ನ, ಆಶ್ರಯದಾತನ ಜರ್ಬಿನ ಅತ್ಯಂತ ಸೂಕ್ಷ್ಮ ಚಹರೆಯನ್ನು ಕೂಡ ಅಸಮಾಧಾನದಿಂದ ನೋಡಲಾಗುತ್ತದೆ ಮತ್ತು ಮುಂದೂ ಅಸಮಾಧಾನ ವ್ಯಕ್ತ ಪಡಿಸಲಾಗುತ್ತದೆ (ಚಪ್ಪಾಳೆ). ಕಳೆದ ಕೆಲವು ತಿಂಗಳಿನಲ್ಲಿ ಎಷ್ಟೇ ಕಷ್ಟಗಳನ್ನು ನಾವು ಎದುರಿಸಿದರೂ ಕೂಡ ಸಹಕಾರದ ಒಂದು ವಾತಾವರಣವನ್ನು ಸೃಷ್ಟಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇವೆ ಎಂದು ನಾನು ಭಾವಿಸುತ್ತೇನೆ. ಆ ಪ್ರಯತ್ನವನ್ನು ನಾವು ಮುಂದುವರಿಸಬೇಕು. ಆದರೆ ಬೇರೆಯವರಿಂದ ಸಾಕಷ್ಟು ಮತ್ತು ಸಮರ್ಪಕವಾದ ಪ್ರತಿಸ್ಪಂದನ ದೊರೆಯದಿದ್ದರೆ ಆ ವಾತಾವರಣವು ಧಕ್ಕೆಗೊಳಗಾಗುತ್ತದೆ ಎಂದು ನಾನು ಬಹಳಷ್ಟು ಭೀತಿಗೊಳಗಾಗಿದ್ದೇನೆ. ಅದೇನೆ ಇದ್ದರೂ, ಮಹಾನ್ ಕಾರ್ಯಗಳನ್ನು ಮಾಡಲು ನಾವು ದೃಢ ನಿಶ್ಚಯ ಮಾಡಿರುವುದರಿಂದ ಆ ಪ್ರಯತ್ನದಲ್ಲಿ ನಾವು ಮುಂದುವರಿಯುತ್ತೇವೆ ಎಂದು ನಾನು ನಿರೀಕ್ಷಿಸುತ್ತೇನೆ ಮತ್ತು ನಂಬುತ್ತೇನೆ ಮತ್ತು ಹಾಗೆ ಮುಂದುವರಿದರೆ ನಾವು ಯಶಸ್ವಿಯಾಗುತ್ತೇವೆ ಎಂದು ನಾನು ನಿರೀಕ್ಷಿಸುತ್ತೇನೆ. ನಮ್ಮದೇ ದೇಶವಾಸಿಗಳೊಡನೆ ವ್ಯವಹರಿಸಬೇಕಾದಾಗ, ನಮ್ಮ ದೇಶವಾಸಿಗಳಲ್ಲಿ ಕೆಲವರು ತಪ್ಪುಹಾದಿಯನ್ನು ಹಿಡಿದಿದ್ದಾರೆ ಎನ್ನುವುದು ನಮ್ಮ ಅಭಿಪ್ರಾಯವಾಗಿದ್ದರೂ, ಆ ಪ್ರಯತ್ನವನ್ನು ನಾವು ಮುಂದುವರಿಸಬೇಕು. ಏಕೆಂದರೆ, ಏನೇ ಆದರೂ ನಾವು ದೇಶದಲ್ಲಿ ಒಟ್ಟಿಗೆ ಕೆಲಸ ಮಾಡಬೇಕು. ನಾವು ಸಹಕರಿಸಬೇಕಾದದ್ದು ಅನಿವಾರ್ಯವಾಗಿದೆ, ಇಂದಲ್ಲದಿದ್ದರೂ ನಾಳೆ ಅಥವಾ ನಾಡಿದ್ದು. ಆದ್ದರಿಂದ ನಾವು ಯಾವುದಕ್ಕಾಗಿ ಕೆಲಸ ಮಾಡುತ್ತಿದ್ದೇವೆಯೋ ಆ ಭವಿಷ್ಯದ ಸೃಷ್ಟಿಯಲ್ಲಿ ಒಂದು ಹೊಸ ಕಷ್ಟವನ್ನು ಸೃಷ್ಟಿಸುವಂತಹ ಏನನ್ನೇ ಆದರೂ ಪ್ರಸ್ತುತದಲ್ಲಿ ನಿವಾರಿಸಬೇಕು. ಆದ್ದರಿಂದ ನಮ್ಮದೇ ಆದ ದೇಶವಾಸಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವರ ಸಹಕಾರವನ್ನು ಅಪಾರ ಪ್ರಮಾಣದಲ್ಲಿ ಗಳಿಸಲು ನಾವು ಶಕ್ತಿಮೀರಿ ಪ್ರಯತ್ನ ಮಾಡಬೇಕು. ಆದರೆ ಸಹಕಾರವೆಂದರೆ ನಾವು ಯಾವ ಮೂಲಭೂತ ವ್ಯವಹಾರಗಳ ಮೇಲೆ ನಿಂತಿದ್ದೇವೆಯೊ ಮತ್ತು ಯಾವುದರ ಮೇಲೆ ನಾವು ನಿಲ್ಲಬೇಕೋ ಅದನ್ನು ತೊರೆಯುವುದು ಎಂದು ಅರ್ಥವಾಗಲಾರದು. ನಮ್ಮ ಜೀವನಕ್ಕೆ ಅರ್ಥವನ್ನು ಕೊಟ್ಟ ಪ್ರತಿಯೊಂದನ್ನು ಒಪ್ಪಿಸಬೇಕು ಎನ್ನುವಂತಹ ಸಹಕಾರ ಇದಲ್ಲ. ಇದರ ಹೊರತಾಗಿಯೂ, ನಾನು ಹೇಳಿದಂತೆ, ಈ ಹಂತದಲ್ಲಿಯೂ, ಪರಸ್ಪರ ಸಂಪೂರ್ಣ ಅನುಮಾನದಿಂದ ಕೂಡಿದ, ಇಂಗ್ಲೆಂಡಿನ ಸಹಕಾರವನ್ನೂ ನಾವು ಕೋರುತ್ತೇವೆ. ಆ ಸಹಕಾರವನ್ನು ನಿರಾಕರಿಸಿದರೆ ಅದು ಭಾರತಕ್ಕೆ ಹಾನಿಕರವಾಗುತ್ತದೆ, ಖಂಡಿತವಾಗಿಯೂ ಕೆಲಮಟ್ಟಿಗೆ, ಪ್ರಾಯಃ ಹೆಚ್ಚಾಗಿಯೇ ಇಂಗ್ಲೆಂಡಿಗೂ ಆಗುತ್ತದೆ ಮತ್ತು ಕೆಲಮಟ್ಟಿಗೆ ವಿಶಾಲ ಜಗತ್ತಿಗೂ ಆಗುತ್ತದೆ ಎಂದು ನಾವು ಭಾವಿಸುತ್ತೇವೆ. ನಾವು ಈಗಷ್ಟೇ ವಿಶ್ವಯುದ್ಧದಿಂದ ಹೊರ ಬಂದಿದ್ದೇವೆ. ಜನರು ಬರಲಿರುವ ಹೊಸ ಯುದ್ಧಗಳ ಬಗೆಗೆ ಅಸ್ಪಷ್ಟವಾಗಿ ಮತ್ತು ಸ್ವಲ್ಪಮಟ್ಟಿಗೆ ಹುಚ್ಚುಹುಚ್ಚಾಗಿ ಮಾತಾಡುತ್ತಾರೆ. ಅಂತಹ ಕಾಲಘಟ್ಟದಲ್ಲಿ ಹೊಸ ಭಾರತವು ಜನ್ಮತಳೆಯುತ್ತಿದೆ– ಪುನರುಜ್ಜೀವಿತವಾಗಿ, ಜೀವಧಾರಕವಾಗಿ, ನಿರ್ಭಯವಾಗಿ. ಜಗತ್ತಿನ ಈ ಸಂಕ್ಷೋಭೆಯ ಒಳಗಿನಿಂದ ಈ ನವಜನ್ಮವು ಸಂಭವಿಸುವುದಕ್ಕೆ ಪ್ರಾಯಃ ಈ ಕ್ಷಣ ಸೂಕ್ತವೆಂದು ತೋರುತ್ತದೆ. ಆದರೆ ಸಂವಿಧಾನ ರಚನೆಯ ಬೃಹತ್ ಕಾರ್ಯವನ್ನು ಹೊಂದಿರುವ ನಾವು ಈ ಕ್ಷಣದಲ್ಲಿ ನಿಸ್ಸಂದಿಗ್ಧವಾಗಿರಬೇಕು. ನಾವು ವರ್ತಮಾನದ ಈ ಪ್ರಚಂಡ ನಿರೀಕ್ಷೆ ಮತ್ತು ಭವಿಷ್ಯದ ಮಹಾನ್ ನಿರೀಕ್ಷೆಯನ್ನು ಕುರಿತು ಯೋಚಿಸಬೇಕು ಮತ್ತು ಈ ಗುಂಪಿಗೆ ಅಥವಾ ಆ ಗುಂಪಿಗೆ ಸಣ್ಣಪುಟ್ಟ ಲಾಭಗಳನ್ನು ಅರಸುವುದರಲ್ಲಿ ಕಳೆದುಹೋಗಬಾರದು. ಈ ಸಂವಿಧಾನ ರಚನಾಸಭೆಯಲ್ಲಿ ನಾವು ವಿಶ್ವರಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ ಮತ್ತು ಜಗತ್ತಿನ ಕಣ್ಣುಗಳು ನಮ್ಮ ಮೇಲಿವೆ. ನಾವು ಇಲ್ಲಿ ಏನು ಮಾಡುತ್ತಿದ್ದೇವೆ ಎನ್ನುವುದಕ್ಕೆ ನಮ್ಮ ಭೂತಕಾಲವು ಸಾಕ್ಷೀಭೂತವಾಗಿದೆ, ಭವಿಷ್ಯತ್ಕಾಲವು ಇನ್ನೂ ಹುಟ್ಟಿಲ್ಲದಿದ್ದರೂ, ಭವಿಷ್ಯತ್ಕಾಲ ಕೂಡ ಹೇಗೋ ನಮ್ಮತ್ತ ನೋಡುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಆದ್ದರಿಂದ ನಾನು ಈ ಸದನಕ್ಕೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ನಿರ್ಣಯವನ್ನು

ನಮ್ಮ ಭೂತಕಾಲದ ಶಕ್ತಿಪೂರ್ಣ ನಿರೀಕ್ಷೆಯಲ್ಲಿ ವರ್ತಮಾನದ ಸಂಕ್ಷೋಭೆಯಲ್ಲಿ ಮತ್ತು ಶೀಘ್ರದಲ್ಲಿಯೇ ಸಂಭವಿಸಲಿರುವ ಮಹಾನ್ ಅಜಾತ ಭವಿಷ್ಯತ್ಕಾಲದ ನಿರೀಕ್ಷೆಯಲ್ಲಿ ಪರಿಗಣಿಸಿ. ಮಾನ್ಯರೆ, ನಾನು ಮಂಡಿಸಲು ಅಪ್ಪಣೆ ಕೋರುತ್ತಿದ್ದೇನೆ. (ದೀರ್ಘಕಾಲ ಹರ್ಷೋದ್ಗಾರಗಳು).

**ಮಾನ್ಯ ಅಧ್ಯಕ್ಷರು** : ಶ್ರೀ ಪುರುಷೋತ್ತಮ ದಾಸ್ ಟಂಡನ್ ಅವರು ಈ ನಿರ್ಣಯವನ್ನು ಅನುಮೋದಿಸುತ್ತಾರೆ.

**ಗೌರವಾನ್ವಿತ ಶ್ರೀ ಪುರುಷೋತ್ತಮ ದಾಸ್ ಟಂಡನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ): *[ಮಾನ್ಯ ಅಧ್ಯಕ್ಷರೇ, ನನ್ನ ಸೋದರ ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಸಂವಿಧಾನ ರಚನಾಸಭೆಯ ಇಂದಿನ ಅಧಿವೇಶನವು ಒಂದು ಚರಿತ್ರಾರ್ಹ ಸಂದರ್ಭವಾಗಿದೆ. ಅನೇಕ ಶತಮಾನಗಳ ಅನಂತರ ಅಂತಹ ಒಂದು ಸಭೆಯನ್ನು ನಮ್ಮ ದೇಶದಲ್ಲಿ ಕರೆಯಲಾಗಿದೆ. ಅದು ನಮ್ಮ ಮನಸ್ಸಿಗೆ ನಮ್ಮ ಭವ್ಯ ಭೂತಕಾಲವನ್ನು ನೆನಪಿಗೆ ತರುತ್ತಿದೆ. ಆಗ ನಾವು ಸ್ವತಂತ್ರರಾಗಿದ್ದೆವು. ಆಗ ನಡೆಯುತ್ತಿದ್ದ ಸಭೆಗಳಲ್ಲಿ ಪಂಡಿತರು ಸೇರಿ ದೇಶದ ಪ್ರಮುಖ ವಿದ್ಯಮಾನಗಳನ್ನು ಕುರಿತು ಚರ್ಚಿಸುತ್ತಿದ್ದರು. ಇದು ನಮಗೆ ಅಶೋಕನ ಯುಗದ ಸಭೆಗಳನ್ನು ನೆನಪಿಗೆ ತರುತ್ತದೆ. ನಮ್ಮ ಕಣ್ಣ ಮುಂದೆ ಆ ದಿನಗಳ ಮಸುಕಾದ ಚಿತ್ರಗಳಿವೆ. ಅಮೆರಿಕ, ಫ್ರಾನ್ಸ್ ಮತ್ತು ರಷ್ಯಾ ಅಂತಹ ಇತರ ದೇಶಗಳ ಸಭೆಗಳ ನೆನಪೂ ನಮಗಾಗುತ್ತದೆ. ಇತರ ಮುಕ್ತ ದೇಶಗಳ ಸಂವಿಧಾನಗಳನ್ನು ರಚಿಸಲು ಸಭೆ ಸೇರಿದ ಇತರರೊಡನೆ ನಮ್ಮ ಸಂವಿಧಾನ ರಚನಾಸಭೆಯನ್ನೂ ನೆನೆಯಲಾಗುತ್ತದೆ. ನಾವು ಒಂದು ಸಂವಿಧಾನವನ್ನು ರಚಿಸಲು ಇಲ್ಲಿ ಸಭೆ ಸೇರಿದ್ದೇವೆ. ಭಾರತವು ಅಜ್ಞಾತವಾಸವನ್ನು ತೊರೆದು ಜಗತ್ತಿನ ಒಂದು ಭಾಗವಾಗಿ ಗೌರವಾನ್ವಿತವಾಗಿ ಬಾಳಲು ನಿರ್ಧರಿಸುವುದನ್ನು ಅದು ಜಗತ್ತಿಗೆ ತೋರಿಸುತ್ತದೆ. ಭಾರತವು ಇತರ ದೇಶಗಳೊಡನೆ ಸಹಕರಿಸುತ್ತದೆ, ಅವುಗಳ ಕಷ್ಟದಲ್ಲಿ ಸಹಾಯಮಾಡುತ್ತದೆ ಮತ್ತು ಜಗತ್ತಿನ ಸಾಮಾನ್ಯ ಪ್ರಗತಿಗೆ ಅನುವಾಗುವ ಅವುಗಳ ಎಲ್ಲ ವಿದ್ಯಮಾನಗಳಲ್ಲಿ ನೆರವಾಗುತ್ತಿದೆ. ನಾವು ಇಂದು ಇಲ್ಲಿ ಏನು ಮಾಡುತ್ತಿದ್ದೇವೆಯೋ ಅದು ಒಂದು ಚರಿತ್ರಾರ್ಹ ಘಟನೆಯಾಗುತ್ತದೆ. ಜಗತ್ತಿನ ಪ್ರಗತಿಗೆ ನೆರವಾದ ಮಹಾನ್ ಘಟನೆಗಳೊಡನೆ ಅದನ್ನೂ ಎಣಿಕೆ ಮಾಡಲಾಗುತ್ತದೆ.

ಭಾರತವು ಕಳೆದ ೧೫೦ ವರ್ಷಗಳಿಂದ ಬ್ರಿಟಿಷರ ಆಧಿಪತ್ಯದ ಅಡಿಯಲ್ಲಿ ಇದೆ. ಬ್ರಿಟಿಷ್ ರಾಜ್ ಆಗಮನ ಕಾಲದಿಂದಲೂ ಯಾವುದರ ವಿರುದ್ಧ ನಿರಂತರವಾಗಿ ನಮ್ಮ ಧ್ವನಿಯನ್ನು ಎತ್ತುತ್ತಾ ಬಂದಿದ್ದೇವೆಯೋ ಅದನ್ನು ಕುರಿತು ಮಾತಾಡಲು ನಾವು ಬಯಸುವುದಿಲ್ಲ. ಕಳೆದ ಈ ಒಂದೂವರೆ ಶತಮಾನದಲ್ಲಿ ಭಾರತಕ್ಕೆ ಮಾಡಿದ ಅನ್ಯಾಯಗಳನ್ನು ಸದ್ಯ ನಾವು ಮಾತಾಡುವುದಿಲ್ಲ. ಅವರು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡದ್ದಷ್ಟೇ ಅಲ್ಲದೆ ನಮ್ಮ ನಡುವೆ ಅನೈಕಮತ್ಯವನ್ನು ಸೃಷ್ಟಿಸಿದರು. ಇಂದು ನಾವು ಈ ವಿವರಗಳಿಗೆ ಹೋಗುವುದಿಲ್ಲ. ಹೇಗಾದರೂ, ನಾವು ನಮ್ಮ ನೇತಾರರ ಹೋರಾಟ ಮತ್ತು ಬಲಿದಾನಗಳನ್ನು ಕಡೆಗಣಿಸಲಾರೆವು. ಪ್ರಾರಂಭದಲ್ಲಿ ನಮ್ಮ ನೇತಾರರು ವಿವರಣೆಗಳಿಂದ ಕೂಡಿದ ನಿರ್ಣಯಗಳನ್ನು ಅಂಗೀಕರಿಸಿ ಸರ್ಕಾರಕ್ಕೆ ಅವುಗಳನ್ನು ಸಲ್ಲಿಸುತ್ತಾ ಸ್ವಾತಂತ್ರ್ಯಕ್ಕಾಗಿ ಹಕ್ಕೊತ್ತಾಯ ಮಾಡುತ್ತಿದ್ದರು. ನಮ್ಮನ್ನು ಬಹಿರಂಗವಾಗಿ ದರ್ಪಕ್ಕೆ ಗುರಿಪಡಿಸಲಾಯಿತು ಮತ್ತು ಪ್ರಾಂತ್ಯಗಳ ಸರ್ಕಾರಗಳು ಎಲ್ಲೆಲ್ಲೂ ಬಹಿರಂಗವಾಗಿಯೇ ಬ್ರಿಟಿಷರಿಗೆ ಅನುಕೂಲಕರವಾಗಿದ್ದವು. ನಾವು ನಮ್ಮನ್ನು ಆಳುತ್ತಿದ್ದವರಿಗೆ ನಮ್ಮೊಡನೆ ನ್ಯಾಯಯುತವಾಗಿ ನಡೆದುಕೊಳ್ಳಬೇಕೆಂದು ಮನಃಪೂರ್ವಕವಾಗಿ ಮನವಿ ಮಾಡಿಕೊಂಡೆವು. ನಮ್ಮ ನೇತಾರರು ಅವರ ಉನ್ನತ ಆದರ್ಶಗಳನ್ನು, ಬರ್ಕ್ ಮತ್ತು ಮಿಲ್ ಅವರ ಆದರ್ಶಗಳನ್ನು ಉಲ್ಲೇಖಿಸಿದ್ದರು. ಅವರು ಬ್ರಿಟಿಷರ ಆದರ್ಶಗಳಲ್ಲಿ ಮುಳುಗಿಹೋಗಿದ್ದರು ಮತ್ತು ಬ್ರಿಟಿಷರು ತಮಗೆ ನ್ಯಾಯ ಸಲ್ಲಿಸುತ್ತಾರೆ ಮತ್ತು ಸ್ವಾತಂತ್ರ್ಯವನ್ನು ಕೊಡುತ್ತಾರೆ ಎಂದು ನಿರೀಕ್ಷಿಸಿದ್ದರು. ಆ ಕಾಲ ಈಗ ಕಳೆದುಹೋಗಿದೆ. ಪ್ರಾರ್ಥನೆಗಳಿಂದ ಮತ್ತು ಮನವಿಗಳಿಂದ ಸ್ವಾತಂತ್ರ್ಯವನ್ನು ಪಡೆಯಲಾಗುವುದಿಲ್ಲ

ಎಂದು ನಮ್ಮ ಅನುಭವವು ನಮಗೆ ತೋರಿಸಿದೆ. ಉಗ್ರವಾದ ಕ್ರಮಗಳು ಅನಿವಾರ್ಯವಾಗಿವೆ. ಹೊಸ ಆಂದೋಲನಗಳು ಪ್ರಾರಂಭವಾದವು ಮತ್ತು ಬ್ರಿಟಿಷರಿಗೆ ಬಹಿರಂಗ ವಿರೋಧವನ್ನು ತೋರುವುದು ಆರಂಭವಾಯಿತು ಎಂದು ನಮ್ಮ ಇತಿಹಾಸದ ಪುಟಗಳು ತೋರಿಸುತ್ತವೆ. ೧೯೦೫–೦೬ರ ಚಳವಳಿಯು ನಮ್ಮ ದೇಶವು ಪ್ರಗತಿಯ ಏಣಿಯ ಕೆಲವು ಮೆಟ್ಟಿಲುಗಳನ್ನು ಏರಲು ನೆರವಾಯಿತು. ಆ ಸಮಯದಲ್ಲಿ ನಮ್ಮ ಧೈರ್ಯಶಾಲಿ ಬಂಗಾಳದ ನೇತಾರರು ಮತ್ತು ಯುವಜನರು ಕಾರ್ಯಪ್ರವೃತ್ತರಾದರು. ಅದನ್ನು ನಮ್ಮ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಲಾಗುತ್ತದೆ. ನಾವು ಮುನ್ನುಗ್ಗಿದೆವು. ನಮ್ಮ ರಾಷ್ಟ್ರೀಯ ನಾಯಕರಾದ ಮಹಾತ್ಮ ಗಾಂಧಿ ರಾಜಕೀಯದ ಕ್ಷೇತ್ರಗಳಲ್ಲಿ ಕಾಣಿಸಿಕೊಂಡರು ಮತ್ತು ನಮ್ಮ ಹೋರಾಟದ ವಿಧಾನಗಳನ್ನು ಬದಲಾಯಿಸಿದರು. ಅವರು ನಮಗೆ ಹೊಸ ವಿಧಾನಗಳನ್ನು ಬೋಧಿಸಿದರು ಮತ್ತು ನಾವು ಹೊಸದಾಗಿ ಪ್ರಾರಂಭಿಸಿದೆವು. ಬ್ರಿಟಿಷ್ ಕಾನೂನುಗಳನ್ನು ಬಹಿರಂಗವಾಗಿ ಧಿಕ್ಕರಿಸಲಾಯಿತು. ಅನುಸರಿಸಿ ಬರಬಹುದಾದ ಉಗ್ರ ಪರಿಣಾಮಗಳನ್ನು ಲೆಕ್ಕಿಸದೆ ಅವುಗಳನ್ನು ಬಹಿರಂಗವಾಗಿ ಉಲ್ಲಂಘಿಸಲಾಯಿತು. ನಮ್ಮ ಸಾವಿರಾರು ಜನರು ಕಾಯಿದೆ ಭಂಗ ಮಾಡಿ ಸೆರೆಮನೆಗಳಿಗೆ ಹೋದರು. ಸೆರೆಮನೆಗಳಲ್ಲಿ ಅನೇಕ ವರ್ಷಗಳ ಕಾಲ ನರಳಿ ಪ್ರಾಣ ತೆತ್ತವರ ಚಿತ್ರಗಳು ನಮ್ಮ ಕಣ್ಣ ಮುಂದೆ ನಿಂತಿವೆ. ಇತ್ತೀಚಿನ ಚಳವಳಿ – ೧೯೪೨ರ ಚಳವಳಿಯು ದಿಟದಲ್ಲಿ ಈ ಸಭೆಯ ಸೃಷ್ಟಿಗೆ ಕಾರಣವಾಗಿದೆ. ಬ್ರಿಟಿಷ್ ಸರ್ಕಾರವು ಈ ಸಂವಿಧಾನ ರಚನಾಸಭೆಯನ್ನು ಕರೆಯುವಂತೆ ಮಾಡುವಲ್ಲಿ ಈ ಚಳವಳಿಯು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದೆ. ನಾವು ಮತ್ತಷ್ಟು ಮುಂದುವರಿಯಲು ಅದು ಹೊಸ ಕ್ಷೇತ್ರಗಳನ್ನು ತೆರೆಯಿತು. ಬ್ರಿಟಿಷ್ ಸರ್ಕಾರದ ಕಣ್ಣುಗಳು ತೆರೆದವು. ಬ್ರಿಟಿಷ್ ಸರ್ಕಾರವು ಇನ್ನು ಭಾರತದಲ್ಲಿ ಉಳಿಯಲಾರದು ಎಂಬ ವಾಸ್ತವಾಂಶವು ಜಗತ್ತಿಗೆ ಎದುರಾಯಿತು. ಇತರ ದೇಶಗಳು ನಮಗೆ ಬಹಿರಂಗವಾಗಿ ಸಹಾಯ ಮಾಡಲಿಲ್ಲ. ಹೇಗಾದರೂ, ನಾವು ಒಪ್ಪಿಕೊಳ್ಳಬೇಕಾದ ಸಂಗತಿಯೇನೆಂದರೆ, ಗುರಿಯೆಡೆಗೆ ನಮ್ಮನ್ನು ಕರೆದೊಯ್ಯುವ ನಮ್ಮ ಶಕ್ತಿಯ ಅಭಿವ್ಯಕ್ತಿಯೇ ಪ್ರಮುಖವಾದ ಸಂಗತಿಯಾಗಿದ್ದರೂ ಅದರ ಜೊತೆಗೆ ಇಂದು ಜಗತ್ತನ್ನು ಒಂದುಗೂಡಿಸಲು ಮಗ್ನರಾಗಿರುವ ಶಕ್ತಿಗಳು ನಮಗೆ ಸಹಾಯಮಾಡಿದವು. ಜಗತ್ತನ್ನು ನೋಡಿದ್ದೇನೆಂದರೆ ಯಾವುದೋ ಒಂದು ದೂರದ ಮೂಲೆಯಲ್ಲಿ ಎಸಗಿದ ದಬ್ಬಾಳಿಕೆಯ ಕ್ರೌರ್ಯವು, ದಬ್ಬಾಳಿಕೆಗೊಳಗಾದ ದೇಶ ಮತ್ತು ಅದರ ನೆರೆಹೊರೆಯ ಮೇಲೆ ದೂರಗಾಮಿಯಾದ ಪರಿಣಾಮಗಳನ್ನು ಹೊಂದಿರುತ್ತದೆ. ಕಳೆದ ಎರಡು ವಿಶ್ವಯುದ್ಧಗಳಲ್ಲಿ ಇದು ಸಾಬೀತಾಗಿದೆ. ಈಗ ಜಗತ್ತಿನ ಮಹಾ ನಾಯಕರು ಮೂರನೆಯ ವಿಶ್ವಯುದ್ಧದಿಂದ ಸಂಭವಿಸಲಿರುವ ವಿಧ್ವಂಸಗಳಿಂದ ಜಗತ್ತನ್ನು ಸಂರಕ್ಷಿಸುವ ಉಪಾಯಗಳನ್ನು ಕುರಿತು ಚಿಂತಿಸುತ್ತಿದ್ದಾರೆ. ಎಲ್ಲಿ ಇನ್ನೆಂದೂ ಯುದ್ಧಗಳು ನಡೆಯುವುದಿಲ್ಲವೋ, ಎಲ್ಲಿ ಮಾನವ ರಕ್ತಪಾತ ಇನ್ನೆಂದೂ ಸಂಭವಿಸುವುದಿಲ್ಲವೋ, ಎಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ದೊಡ್ಡ ಭೇದಭಾವ ಇರುವುದಿಲ್ಲವೊ, ಎಲ್ಲಿ ಪ್ರತಿಯೊಬ್ಬರೂ ಆಹಾರ ಮತ್ತು ಸೌಕರ್ಯಗಳನ್ನು ಪಡೆಯುತ್ತಾರೋ, ಎಲ್ಲಿ ಜನರಿಗೆ ಅವರ ಇಚ್ಛೆಯ ಪ್ರಕಾರ ಜೀವಿಸಲು ಅವಕಾಶವಿರುತ್ತದೆಯೋ, ಎಲ್ಲಿ ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನು ಪಡೆಯುವ ಹಕ್ಕು ಇರುತ್ತದೆಯೋ, ಎಲ್ಲಿ ವಿಚಾರಗಳು ಉದಾತ್ತವೂ ಮತ್ತು ಉದಾತ್ತತರವೂ ಆಗುತ್ತವೆಯೋ ಮತ್ತು ಎಲ್ಲಿ ಮಾನವರ ನಡುವೆ ಆಧ್ಯಾತ್ಮಿಕ ಸಂಬಂಧಗಳು ಬೆಳೆಯುತ್ತವೆಯೋ ಅಂತಹ ಪ್ರದೇಶವಾಗಿ ಅದನ್ನು ಪರಿವರ್ತಿಸಲು ಮತ್ತು ಅದನ್ನು ಒಂದು ಸ್ವರ್ಗವನ್ನಾಗಿ ಮಾಡಲು ಅವರು ಅಪೇಕ್ಷಿಸುತ್ತಾರೆ. ಪ್ರಸ್ತುತ ಹೊರಳಾಡುತ್ತಿರುವ ಕೆಸರುಕುಳಿಯಿಂದ ಜಗತ್ತನ್ನು ಹೊರ ತೆಗೆಯುವ ಕಾನೂನುಗಳನ್ನು ರಚಿಸಲು ಪ್ರಾಜ್ಞರಾದ ಜನರು ಪ್ರಯತ್ನಿಸುತ್ತಿದ್ದಾರೆ. ಅದು ಎಲ್ಲ ದೇಶಗಳಿಗೂ ಸಮಾನವಾದ ಹಕ್ಕುಗಳನ್ನು ನೀಡುತ್ತದೆ. ಕಾಲವು ಕ್ಷಿಪ್ರವಾಗಿ ಬದಲಾಗುತ್ತಿದೆ ಮತ್ತು ಜಗತ್ತಿನ ಶಕ್ತದೇಶಗಳು ಈ ಹೊಸ ವಿಚಾರಗಳ ನಿಟ್ಟಿನಲ್ಲಿ ತಮ್ಮ ಕೊಡುಗೆಯನ್ನು ನೀಡುತ್ತಿವೆ. ನಾವೂ ಕೂಡ, ಈ ಜಗತ್ತಿನಲ್ಲಿ ವಾಸವಾಗಿರುತ್ತ ಅವುಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಉನ್ನತ ಭರವಸೆಗಳಿಗೆ

ಸದಾ ಆಧಾರವಾಗಿರುವ ಈ ಹೊಸ ಶಕ್ತಿಗಳನ್ನು ನಾವು ಅತ್ಯುತ್ಸಾಹದಿಂದ ಸ್ವಾಗತಿಸುತ್ತೇವೆ. ಸಮಸ್ತ ಮನುಕುಲವನ್ನು ಒಂದು ಕುಟುಂಬವೆಂದು ಮತ್ತು ಸಮಸ್ತ ಜಗತ್ತನ್ನು ಒಂದು ದೇಶವೆಂದು ಭಾರತದ ಜನರು ಯಾವಾಗಲೂ ಪರಿಗಣಿಸುತ್ತಿದ್ದಾರೆ ಎಂಬುದನ್ನು ವಿಶೇಷವಾಗಿ ಪ್ರಸ್ತಾವಿಸಬಹುದು. ನಮ್ಮ ನಡುವಿನ ಶ್ರೇಷ್ಠ ವ್ಯಕ್ತಿಗಳು ಎಂದೂ ಕೂಡ ಜಗತ್ತಿನ ಜನರ ನಡುವೆ ಭೇದಭಾವ ಎಣಿಸಲಿಲ್ಲ. ಅನೇಕ ವಿದೇಶೀಯರು ನಮ್ಮ ದೇಶಕ್ಕೆ ಬಂದರು. ನಾವು ಅವರನ್ನು ತೆರೆದ ತೋಳುಗಳಿಂದ ಸ್ವಾಗತಿಸಿದೆವು. ನಮ್ಮ ದೇಶದ ಜನರ ವಿರುದ್ಧ ಕೆಲವು ದೇಶಗಳು ಅಂಗೀಕರಿಸಿದ ನೀತಿಯನ್ನು ನಾವು ಎಂದೂ ಅನುಸರಿಸಲಿಲ್ಲ. ನಮ್ಮ ಇತಿಹಾಸವು ತೋರಿಸುವುದೇನೆಂದರೆ ಬೇರೆ ದೇಶಗಳಿಂದ ಬಂದ ಎಲ್ಲರನ್ನೂ ನಾವು ಸ್ವಾಗತಿಸಿದ್ದೇವೆ. ಅವರಿಗೆ ಅಗತ್ಯವಾದ ಸಹಾಯವನ್ನು ನೀಡಿದ್ದೇವೆ. ನಮ್ಮ ದೇಶಗಳಲ್ಲಿ ತಂಗಲು ಅವರಿಗೆ ನೆರವಾಗಿದ್ದೇವೆ. ಇಂಗ್ಲೆಂಡಿನ ಜನರು ಈ ದೇಶಕ್ಕೆ ಮೊದಲು ಹೇಗೆ ಬಂದರು? ಇಲ್ಲಿ ಅವರಿಗೆ ರಕ್ಷಣೆ ಮತ್ತು ಆಶ್ರಯ ದೊರೆಯಿತು. ಜಗಳಗಳು ಮತ್ತು ಘರ್ಷಣೆಗಳು ಇದ್ದವು. ಆದರೆ ಒಟ್ಟಾರೆಯಾಗಿ ನಾವು ಯಾವಾಗಲೂ ಮಾನವಹಕ್ಕುಗಳನ್ನು ಸಂರಕ್ಷಿಸಿದ್ದೇವೆ ಎನ್ನುವುದನ್ನು ನಮ್ಮ ಇತಿಹಾಸವು ತೋರಿಸುತ್ತದೆ. ಸೋದರರ ನಡುವೆ ಒಡಕು ಹುಟ್ಟಿಸುವುದು ಸರಿ ಎಂದು ನಾವು ಪರಿಗಣಿಸುವುದಿಲ್ಲ ಅಥವಾ ಅವರ ರಾಜಕೀಯ ಹಕ್ಕುಗಳಲ್ಲಿ ಯಾವುದೇ ಭೇದಭಾವವನ್ನು ಮಾಡುವುದಿಲ್ಲ. ನಮ್ಮಲ್ಲಿ ಕೆಲವು ಕೊರತೆಗಳಿದ್ದವು ಮತ್ತು ಈಗಲೂ ಇವೆ ಎನ್ನುವುದರಲ್ಲಿ ನಮಗೆ ಯಾವುದೇ ಅನುಮಾನವಿಲ್ಲ; ಅವುಗಳನ್ನು ನಾವು ಕಡೆಗಣಿಸುವಂತಿಲ್ಲ.

ನಮ್ಮ ಗತ ಇತಿಹಾಸವು ನಮಗೆ ಮುನ್ನುಗ್ಗಲು ಪ್ರಚೋದಿಸುತ್ತಿದೆ. ಸಮಾನತೆಯ ಆದರ್ಶವನ್ನು ನಮ್ಮ ದೇಶದ ಮುಂದಷ್ಟೇ ಅಲ್ಲದೆ ಸಮಸ್ತ ಜಗತ್ತಿನ ಮುಂದೂ ಇರಿಸಬಹುದಾದಂತಹ ಬಿಂದುವನ್ನು ನಾವು ತಲುಪಬೇಕಾಗಿದೆ. ಈ ಐತಿಹಾಸಿಕ ಸಂದರ್ಭದಲ್ಲಿ ನಮ್ಮ ಆಲೋಚನೆಗಳು ನಮ್ಮ ಗತ ಇತಿಹಾಸದ ಮೇಲೆ ಮತ್ತು ನಮ್ಮ ದೇಶದಲ್ಲಿ ಸಂಭವಿಸಿದ ಘಟನೆಗಳ ಮೇಲೆ ಗಮನವಿಡುವುದು ಸಹಜವಾಗಿಯೇ ಇದೆ. ನಮ್ಮ ಹೋರಾಟಗಳ ಮೇಲೆ, ನಮ್ಮ ಬಲಿದಾನಗಳು ಮತ್ತು ಇತರ ದೇಶಗಳಿಂದ ನಾವು ಪಡೆದ ಸಹಾಯಗಳ ಮೇಲೆ ಲಕ್ಷ್ಯವಿಡಬೇಕು. ಅವು ನಮ್ಮನ್ನು ಇಲ್ಲಿ ಒಟ್ಟುಗೂಡಿಸಿವೆ. ನಾವು ಅವುಗಳಿಂದ ಶಕ್ತಿಯನ್ನು ಪಡೆದುಕೊಳ್ಳಬೇಕು. ನಮ್ಮ ದೇಶಕ್ಕೆ ಶಾಂತಿ ಮತ್ತು ನಿರಾಕುಲತೆಯನ್ನು ನೀಡುವ ಒಂದು ಸಂವಿಧಾನವನ್ನು ರಚಿಸಲು ನಾವು ಇಲ್ಲಿಗೆ ಬಂದಿದ್ದೇವೆ. ನಮ್ಮ ಮಾತೃಭೂಮಿಯ ಪ್ರತಿಯೊಬ್ಬ ನಿವಾಸಿಗೂ ಸಮಾನತೆಯನ್ನು ನೀಡುವುದು ನಮ್ಮ ಗುರಿ.

ಇಂದು ನಿಮ್ಮ ಮುಂದೆ ಮಂಡಿಸಲಾಗಿರುವ ನಿರ್ಣಯವು ಸಮಾನತೆಯನ್ನು ತನ್ನ ಮೂಲಾಧಾರ ವಿಷಯವನ್ನಾಗಿ ಹೊಂದಿದೆ. ದೇಶದ ವಿವಿಧ ವಿಭಾಗಗಳಿಗೆ ಸ್ವಯಮಾಧಿಕಾರವನ್ನು ನೀಡಲಾಗಿದೆ ಮತ್ತು ಭಾರತವು ಒಂದು ಅಖಂಡವಾಗಿ ಪೂರ್ಣ ಸಾರ್ವಭೌಮತ್ವದಿಂದ ಉಳಿಯುತ್ತದೆ. ನಮ್ಮ ಒಗ್ಗಟ್ಟನ್ನು ಬೇಡುವ ವಿದ್ಯಮಾನಗಳಲ್ಲಿ ನಾವು ಒಂದಾಗಿ ಉಳಿಯಬೇಕು. ಭಾರತವನ್ನು ಒಂದು ಸ್ವತಂತ್ರವಾದ ದೇಶವನ್ನಾಗಿ ಗುರುತಿಸಿರುವುದು ಈ ನಿರ್ಣಯದಲ್ಲಿರುವ ಒಂದು ಮುಖ್ಯವಾದ ಸಂಗತಿ. ನಮ್ಮ ದೇಶವು ಅಖಂಡವಾಗಿದೆ, ಆದರೂ ಅದರ ವಿವಿಧ ವಿಭಾಗಗಳಿಗೆ ತಾವು ಬಯಸಿದ ಆಡಳಿತವನ್ನು ಇಟ್ಟುಕೊಳ್ಳಲು ನಾವು ಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇವೆ. ಸಂಸ್ಥಾನಗಳಾಗಿ ನಮ್ಮ ದೇಶದ ಪ್ರಸ್ತುತ ವಿಭಾಗವು ಬದಲಾಗಬಹುದು. ಎಲ್ಲ ಸಮುದಾಯಗಳಿಗೂ ನಾವು ನ್ಯಾಯವನ್ನು ಸಲ್ಲಿಸುತ್ತೇವೆ ಮತ್ತು ಅವುಗಳ ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇವೆ.

ಮುಸ್ಲಿಮ್ ಲೀಗ್‌ನವರು ಈ ಸಭೆಯನ್ನು ಸೇರುವವರೆಗೂ ಈ ನಿರ್ಣಯದ ಪರಿಗಣನೆಯನ್ನು ಮುಂದೂಡಬೇಕೆಂದು ಕೋರುವ ತಿದ್ದುಪಡಿಯೊಂದು ಬಂದಿದೆ. ಪ್ರತಿಯೊಂದು ಕ್ರಿಯೆಗೂ ಒಂದು ಸೂಕ್ತವಾದ ಸಮಯವಿರುತ್ತದೆ ಎಂಬ ವಾಸ್ತವಾಂಶವನ್ನು ನಾವು ಕಡೆಗಣಿಸಬಾರದು. ಇಂದು ನಾವು ಈ ನಿರ್ಣಯವನ್ನು

ಮುಂದೂಡಿದರೆ, ಮತ್ತೆ ಯಾವಾಗ ಅದು ನಮ್ಮ ಮುಂದೆ ಬರುತ್ತದೆ? ಮುಸ್ಲಿಮ್ ಲೀಗ್ ಯಾವಾಗ ಒಳಬರುತ್ತದೆ ಎಂಬುದು ನಮಗೆ ಖಚಿತವಾಗಿ ಗೊತ್ತಿಲ್ಲ. ಇಂದು ಇಲ್ಲಿ ನಾವು ಒಟ್ಟಿಗೆ ಸೇರಿದ್ದೇವೆ; ಏನೂ ಕೆಲಸ ಮಾಡದೆ ನಾವು ಚೆದರಿಹೋಗಬೇಕೆ? ನಮ್ಮ ಮುಂದಿನ ನಡವಳಿಗಳಿಗೆ ಕನಿಷ್ಠಪಕ್ಷ ಒಂದು ಉದ್ದೇಶವನ್ನಾದರೂ ನಾವು ಹೊಂದಬಾರದೆ? ಕೇವಲ ಒಂದು ವಿಧಾನಗಳ ಸಮಿತಿಯನ್ನು ನೇಮಕ ಮಾಡಿದ ಮೇಲೆ ನಾವು ಹೊರಟು ಹೋಗಬೇಕೆ? ನಿರ್ಣಯದ ಪರಿಗಣನೆಯನ್ನು ಇನ್ನೊಂದು ಸಲಕ್ಕೆ ಮುಂದೂಡಬೇಕೆಂದು ನಮ್ಮ ಸೋದರರು ನಮಗೆ ಸಲಹೆ ನೀಡುತ್ತಾರೆ. ಮುಸ್ಲಿಮ್ ಲೀಗ್‌ನ ಗೈರುಹಾಜರಿಯಲ್ಲಿ ಯಾವ ಕೆಲಸವನ್ನೂ ಮಾಡಬಾರದು ಎನ್ನುವುದು ಅವರ ಇಚ್ಛೆಯಾಗಿದ್ದರೆ, ಅವರು ಇಲ್ಲಿ ಸಭೆ ಸೇರಿದ್ದಾದರೂ ಏಕೆ?

ಮುಸ್ಲಿಮ್ ಲೀಗ್ ನಮ್ಮೊಡನೆ ಸಹಕರಿಸಬೇಕು ಎನ್ನುವುದು ನಮ್ಮ ಅಪೇಕ್ಷೆಯೂ ಆಗಿದೆ. ಆದರೆ ಆ ಸಂಸ್ಥೆಯ ಪ್ರಸ್ತುತ ಗುರಿಗಳು ಮತ್ತು ಮಹತ್ವಾಕಾಂಕ್ಷೆಗಳಿಗೆ ನಾವು ಕೊಡುಗೆ ನೀಡಬಹುದೆ? ನಾವು ಮುಸ್ಲಿಮ್ ಲೀಗ್‌ನ ಉದ್ದೇಶಕ್ಕೆ ಹಾನಿಯಾಗದಂತೆ ನಮ್ಮ ಯತ್ನ ಮೀರಿ ಪ್ರಯತ್ನಿಸುತ್ತೇವೆ; ನಿರ್ಣಯವು ಈ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡಿದೆ ಎನ್ನುವುದು ನಿಮಗೆ ತೋರಿಸಲು ಬಯಸುತ್ತೇನೆ. ಪ್ರಾಂತ್ಯಗಳಿಗೆ ಉಳಿಕೆ ಅಧಿಕಾರವನ್ನು ಕೊಡುವುದನ್ನು ವಿರೋಧಿಸುವವರು ನಮ್ಮಲ್ಲಿ ಅನೇಕರಿದ್ದೇವೆ. ವೈಯಕ್ತಿಕವಾಗಿ, ನನ್ನ ದೇಶದ ಉತ್ತಮ ಹಿತಾಸಕ್ತಿಯ ದೃಷ್ಟಿಯಿಂದ ಪ್ರಾಂತ್ಯಗಳಿಗೆ ಉಳಿಕೆ ಅಧಿಕಾರವನ್ನು ಮಂಜೂರು ಮಾಡುವುದನ್ನು ನಾನು ವಿರೋಧಿಸುತ್ತೇನೆ, ಅದರಲ್ಲೂ ವಿಶೇಷವಾಗಿ ಪ್ರಾಂತ್ಯಗಳಲ್ಲಿ ಹಿಂದೂ–ಮುಸ್ಲಿಮ್ ಸಮಸ್ಯೆಯ ಕಾರಣದಿಂದ ಪ್ರಚಲಿತವಿರುವ ಪರಿಸ್ಥಿತಿಯ ದೃಷ್ಟಿಯಿಂದ. ಬಂಗಾಳ ಮತ್ತು ಇತರ ಪ್ರಾಂತ್ಯಗಳಲ್ಲಿ ಏನಾಯಿತು ಎಂದು ನಮಗೆಲ್ಲ ಗೊತ್ತು. ಉಳಿಕೆ ಅಧಿಕಾರ ಮತ್ತು ರಾಜಕೀಯ ಹಕ್ಕುಗಳು ಕೇಂದ್ರ ಅಥವಾ ಒಕ್ಕೂಟದ ಸರ್ಕಾರದ ವಶದಲ್ಲಿರಬೇಕು. ಆದರೆ ಮುಸ್ಲಿಮ್ ಲೀಗ್‌ನವರು ಅವರ ಗೈರುಹಾಜರಿಯಲ್ಲಿ ನಮ್ಮ ಮನಸ್ಸಿಗೆ ಬಂದಂತೆ ಮಾಡಿಕೊಂಡಿದ್ದೇವೆ ಎಂದು ಹೇಳದಿರಲಿ ಎಂದು ನಿರ್ಣಯವು ಉಳಿಕೆ ಅಧಿಕಾರವನ್ನು ಪ್ರಾಂತ್ಯಗಳಿಗೆ ಕೊಟ್ಟಿದೆ. ಮಿಗಿಲಾಗಿ, ಸಂಪುಟ ನಿಯೋಗವು ಹೊರಡಿಸಿರುವ ರಾಜ್ಯಪತ್ರವು ಸಂವಿಧಾನ ರಚನಾಸಭೆಯ ಅಸ್ತಿವಾರವಾಗಿದ್ದು, ಅದೂ ಕೂಡ ಉಳಿಕೆ ಹಕ್ಕು ಪ್ರಾಂತ್ಯಗಳಿಗೆ ಹೋಗಬೇಕು ಎಂದು ಹೇಳಿದೆ. ಇದು ಮುಸ್ಲಿಮ್ ಲೀಗನ್ನು ನಮ್ಮೊಡನೆ ಕೆಲಸ ಮಾಡಲು ಸಮರ್ಥವಾಗಿಸುತ್ತದೆ ಎಂಬ ನಿರೀಕ್ಷೆಯಿಂದ ನಾವು ಅದನ್ನು ಒಪ್ಪಿಕೊಂಡೆವು. ಮುಸ್ಲಿಮ್ ಲೀಗ್ ನಮ್ಮೊಡನೆ ಸಹಕರಿಸಲು ನಾವು ನಮಗೆ ಸಾಧ್ಯವಾದಷ್ಟು ದೂರ ಕ್ರಮಿಸಿದ್ದೇವೆ. ಇಲ್ಲ, ಅದಕ್ಕಿಂತಲೂ ಹೆಚ್ಚಾಗಿ ನಾವು ಅಗತ್ಯವಾಗಿದ್ದುದಕ್ಕಿಂತ ಮುಂದೆ ಸಾಗಿದ್ದೇವೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ಮುಸ್ಲಿಮ್ ಲೀಗ್ ಕೆಲವು ಉದ್ದೇಶಗಳತ್ತ ಗುರಿಯಿಟ್ಟಿದೆ, ಅವು ಸಂಪೂರ್ಣವಾಗಿ ನಮ್ಮ ಉದ್ದೇಶಗಳಿಗೆ ವ್ಯತಿರಿಕ್ತವಾಗಿವೆ. ಇದು ಭವಿಷ್ಯದಲ್ಲಿ ಅಪಾರ ತೊಂದರೆಗಳಿಗೆ ಕಾರಣವಾಗುತ್ತದೆ. ಮುಸ್ಲಿಮ್ ಲೀಗ್‌ನ ಸಹಕಾರವನ್ನು ಗಳಿಸಿಕೊಳ್ಳುವ ಸಲುವಾಗಿ ನಾವು ನಮ್ಮ ಆದರ್ಶಗಳಿಗೆ ವಿರುದ್ಧವಾದ ಅನೇಕ ಸಂಗತಿಗಳನ್ನು ಒಪ್ಪಿಕೊಳ್ಳುತ್ತಾ ಬಂದಿದ್ದೇವೆ. ಈಗ ನಾವು ಅದಕ್ಕೆ ಒಂದು ಪೂರ್ಣವಿರಾಮವನ್ನು ಹಾಕಬೇಕು ಮತ್ತು ಮುಸ್ಲಿಮ್ ಲೀಗ್‌ನೊಡನೆ ಒಡಂಬಡಿಕೆ ಮಾಡಿಕೊಳ್ಳುವ ಸಲುವಾಗಿ ನಮ್ಮ ಮೂಲಭೂತ ತತ್ತ್ವಗಳನ್ನು ಕಡೆಗಣಿಸಬಾರದು. ಈ ನಿರ್ಣಯವನ್ನು ಮುಂದೂಡುವುದಕ್ಕೆ ನಾನು ವಿರೋಧವಾಗಿದ್ದೇನೆ, ಮತ್ತು ಈ ಸದನವು ಈ ನಿರ್ಣಯದ ಮಹತ್ತ್ವವನ್ನು ಮನಗಾಣುತ್ತದೆ ಎಂದು ನಾನು ದೃಢವಿಶ್ವಾಸದಿಂದಿದ್ದೇನೆ. ಬೇರೆ ದೇಶಗಳಲ್ಲಿನ ಸಂವಿಧಾನ ರಚನಾಸಭೆಗಳು ತಮ್ಮ ಉದ್ದೇಶಗಳನ್ನು ಮುಂದಿಟ್ಟುಕೊಂಡು ಕೆಲಸವನ್ನು ಪ್ರಾರಂಭಿಸಿದ್ದವು. ನೀವು ಈ ನಿರ್ಣಯವನ್ನು ಮುಂದೂಡಿದರೆ ಜಗತ್ತು ಏನೆಂದುಕೊಳ್ಳುತ್ತದೆ? ಅವರು ಈ ನಿರ್ಣಯವನ್ನು ಕುರಿತು ಕೇಳಿದರೆ ಭಾರತವು ಸ್ವತಂತ್ರವಾಗುತ್ತಿದೆ ಎಂದು ಯೋಚಿಸುತ್ತಾರೆ. ೧೯೪೨ರಲ್ಲಿ ಭಾರತವು ಬ್ರಿಟಿಷರ ವಿರುದ್ಧ ಪ್ರಾರಂಭಿಸಿದ ಭಾರತ ಬಿಟ್ಟು ತೊಲಗಿ, ಹೊರಾಟವು ಗೆಲುವನ್ನು ಪಡೆಯುತ್ತಿದೆ

ಎಂದು ಯೋಚಿಸುತ್ತಾರೆ. ಈ ನಿರ್ಣಯವು ಸ್ವಾತಂತ್ರ್ಯದ ನಿಮ್ಮ ಉದ್ದೇಶಕ್ಕೆ ಅಪಾರವಾದ ಪ್ರಾಮುಖ್ಯವನ್ನು ನೀಡುತ್ತದೆ.

ಈ ನಿರ್ಣಯಕ್ಕೆ ಇನ್ನು ಕೆಲವು ತಿದ್ದುಪಡಿಗಳಿವೆ. ಅಧಿಕಾರವು ಸಂಪೂರ್ಣವಾಗಿ ಜನರ ವಶದಲ್ಲಿಯೇ ಇರಬೇಕು ಎಂದು ನಿರ್ಣಯವು ಸ್ಪಷ್ಟವಾಗಿ ತೋರಿಸಿದೆ. ಕೆಲವು ಸದಸ್ಯರು ಜನರು ಎಂಬುದರ ಸ್ಥಾನದಲ್ಲಿ 'ಕೆಲಸ ಮಾಡುವ ಜನರು' ಎಂದು ಬದಲಾಯಿಸಬೇಕು ಎಂದು ಸಲಹೆ ಮಾಡುತ್ತಾರೆ. ನಾನು ಇದಕ್ಕೆ ವಿರೋಧವಾಗಿದ್ದೇನೆ 'ಜನರು' ಎಂಬ ಶಬ್ದಕ್ಕೆ ಎಲ್ಲ ಜನರು ಎಂಬ ಅರ್ಥವಿದೆ. ನಾನು ಸ್ವತಃ ರೈತರ ಸೇವಕ. ಅವರೊಡನೆ ಕೆಲಸ ಮಾಡುವುದು ನನ್ನ ಅತ್ಯುನ್ನತ ಹಿಗ್ಗು. 'ಜನರು' ಎಂಬ ಶಬ್ದವು ವ್ಯಾಪಕವಾದದ್ದು ಮತ್ತು ಎಲ್ಲ ಜನರನ್ನೂ ಅದು ಒಳಗೊಳ್ಳುತ್ತದೆ. ಆದ್ದರಿಂದ ಅದಕ್ಕೆ ಯಾವ ವಿಶೇಷಣವನ್ನು ಹಚ್ಚಬಾರದು ಎನ್ನುವುದು ನನ್ನ ಅಭಿಪ್ರಾಯ. ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಮುಂತಾದವನ್ನು ಕೇಳುವ ತಿದ್ದುಪಡಿಗಳಿವೆ. ಇವೆಲ್ಲ ಸಣ್ಣ ವಿಚಾರಗಳು. ಕಾಲ ಬದಲಾಗಿದೆ. ಈ ಸಂಗತಿಗಳನ್ನು ಜಾರಿಗೆ ತರಲು ಪ್ರಾಂತೀಯ ಸರ್ಕಾರಗಳು ಕಾನೂನುಗಳನ್ನು ಮಾಡಿವೆ. ಪ್ರಕೃತ ಸಂದರ್ಭದಲ್ಲಿ ನಾವು ದೊಡ್ಡ ವಿಚಾರಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಈ ಎಲ್ಲ ತಿದ್ದುಪಡಿಗಳು ಅನಾವಶ್ಯಕವಾದವು ಮತ್ತು ಅವುಗಳನ್ನು ಮಂಡಿಸಕೂಡದು.

ಈಗಾಗಲೇ ನಾನು ಹೇಳಿದಂತೆ ಅನೇಕ ಅಗ್ನಿಪರೀಕ್ಷೆಗಳನ್ನು ದಾಟಿದ ಅನಂತರ ನಮಗೆ ಒಂದು ಸಂವಿಧಾನವನ್ನು ರಚಿಸುವ ಅವಕಾಶ ದೊರೆತಿದೆ. ೧೯೩೫ರಲ್ಲಿ ನಮಗೆ ಕೆಲವು ಹಕ್ಕುಗಳು ದೊರೆತವು. ೧೯೪೨ರವರೆಗೂ ನಾವು ನಮ್ಮ ಹೋರಾಟವನ್ನು ಮುಂದುವರಿಸಿದೆವು, ಈಗ, ಈ ಎಲ್ಲ ಹೋರಾಟಗಳ ಫಲವಾಗಿ ಒಂದು ಸಂವಿಧಾನವನ್ನು ರಚಿಸಲು ನಾವು ಇಲ್ಲಿ ಸೇರಿದ್ದೇವೆ. ನಮ್ಮ ಪ್ರಯತ್ನಗಳ ಫಲಿತಾಂಶ ಏನಾಗುತ್ತದೆಯೋ ಇನ್ನೂ ನಮಗೆ ಗೊತ್ತಿಲ್ಲ. ನಮ್ಮ ದಾರಿ ಇನ್ನೂ ಅಡೆತಡೆಗಳಿಂದ ತುಂಬಿದೆ. ಲಂಡನ್ನಿನಲ್ಲಿರುವ ನಮ್ಮ ಸ್ನೇಹಿತರು ತಮ್ಮ ಸಲಹೆಗಳನ್ನು ನಮಗೆ ಕಳುಹಿಸಿಕೊಡುತ್ತಾರೆ. ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಕೆಲವು ತತ್ತ್ವಗಳನ್ನು ಕುರಿತು ಮಾತನಾಡುವಾಗ ಒಂದು ಸೂತ್ರವನ್ನು ಅಂಗೀಕರಿಸಲು ನಮಗೆ ಸಲಹೆ ಕೊಡುತ್ತಾರೆ. ಅದೇನೆಂದರೆ, ಬಹುಸಂಖ್ಯಾತರು ತಮ್ಮದೇ ಸಂವಿಧಾನವನ್ನು ರಚಿಸಿಕೊಳ್ಳಬೇಕು. ಇತ್ತ ಅಲ್ಪಸಂಖ್ಯಾತರು ಬಹುಸಂಖ್ಯಾತರಿಂದ ಬರಬಹುದಾದ ಯಾವುದೇ ಅಡೆತಡೆಗಳ ವಿರುದ್ಧ ತಮ್ಮದೇ ಆದ ಸುರಕ್ಷಣೆಯನ್ನು ಹೊಂದಿರುವ ಹಕ್ಕನ್ನು ಪಡೆದಿರಬೇಕು. ಸರ್ ಸ್ಟ್ಯಾಫರ್ಡ್ ಅವರು ನಮಗೆ ಸಹಾಯ ಮಾಡುತ್ತಿರುವುದಾಗಿ ಹೇಳಿಕೊಂಡರೂ, ಅವರ ನಿಜವಾದ ಗುರಿಯು ನಮ್ಮ ದಾರಿಯಲ್ಲಿ ಅಡೆತಡೆಗಳನ್ನು ನಿಲ್ಲಿಸುವುದೇ ಆಗಿದೆ ಎಂದು ನಾನು ವಿಷಾದದಿಂದ ಹೇಳಲು ಬಯಸುತ್ತೇನೆ. ಬ್ರಿಟಿಷರೊಡನೆ ನಮ್ಮ ಸಂಬಂಧಗಳ ಇತಿಹಾಸವು ತೋರುವುದೇನೆಂದರೆ ಹಿಂದೂ-ಮುಸ್ಲಿಮ್ ಭಿನ್ನಾಭಿಪ್ರಾಯಗಳು ಶುದ್ಧಾಂಗವಾಗಿ ಒಂದು ಬ್ರಿಟಿಷ್ ಸೃಷ್ಟಿ.

ಬ್ರಿಟಿಷರು ಹಾಡಿದ್ದೇ ಹಾಡುತ್ತಿರುವ ಈ ಭಿನ್ನಾಭಿಪ್ರಾಯಗಳನ್ನು ಸೃಷ್ಟಿ ಮಾಡಿದವರು ಅವರೇ. ಅವರ ಆಗಮನಕ್ಕೆ ಮೊದಲು ಅವು ಅಸ್ತಿತ್ವದಲ್ಲಿ ಇರಲಿಲ್ಲ. ಹಿಂದೂಗಳು ಮತ್ತು ಮುಸ್ಲಿಮರು ಒಂದು ಸಾಮಾನ್ಯ ನಾಗರಿಕತೆಯನ್ನು ಹೊಂದಿದ್ದರು ಮತ್ತು ಸೌಹಾರ್ದದಿಂದ ಬಾಳುತ್ತಿದ್ದರು. ಭಾರತದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿಯು ತಮ್ಮ ಸೃಷ್ಟಿಯಲ್ಲ ಮತ್ತು ಅದಕ್ಕೆ ತಮ್ಮ ಕುಮ್ಮಕ್ಕು ಇಲ್ಲ ಎಂದು ಬ್ರಿಟಿಷರು ಹೇಳಬಲ್ಲರೆ? ಬ್ರಿಟಿಷರ ಚಿತಾವಣೆಯಿಂದ ನಮ್ಮನ್ನು ವಿರೋಧಿಸುತ್ತಿರುವವರು ನಮ್ಮ ಸೋದರವರ್ಗದವರೇ ಮತ್ತು ಖಂಡಿತವಾಗಿಯೂ ನಾವು ಅವರ ಸಹಕಾರವನ್ನು ಅಪೇಕ್ಷಿಸುತ್ತೇವೆ. ಆದರೆ ಅವರನ್ನು ನಮ್ಮ ಕಡೆ ಇಟ್ಟುಕೊಳ್ಳುವುದಕ್ಕಾಗಿ ನಾವು ಈ ಮೂಲಭೂತ ತತ್ತ್ವಗಳನ್ನು ತ್ಯಾಗ ಮಾಡಲಾಗುವುದಿಲ್ಲ. ಇಲ್ಲಿಯವರೆಗೂ ಅವುಗಳ ಬಗೆಗೆ ಕಡುನಿಷ್ಠೆಯಿಂದಿದ್ದೇವೆ. ಅವುಗಳು ಸೇರಿಯೇ ರಾಷ್ಟ್ರದ ನಿರ್ಮಾಣವಾಗುವುದು. ಸರ್ ಸ್ಟ್ಯಾಫರ್ಡ್ ಅಂತರ್ಯುದ್ಧದ ಎಚ್ಚರಿಕೆಯನ್ನು ನಮಗೆ ಕೊಡುತ್ತಾರೆ ಮತ್ತು ಅದನ್ನು ತಡೆಯಲು ನಾವು ಪರಸ್ಪರ ಸಹಕರಿಸಬೇಕೆಂದು ನಮಗೆ ಸಲಹೆ ನೀಡುತ್ತಾರೆ. ಯಾವ ದೇಶಭಕ್ತನೂ ಅಂತರ್ಯುದ್ಧವನ್ನು

ಮತ್ತು ತನ್ನದೇ ದೇಶವಾಸಿಗಳ ರಕ್ತಪಾತವನ್ನು ಬಯಸುವುದಿಲ್ಲ. ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಕಾಂಗ್ರೆಸ್ ಪಕ್ಷವು ಜನಸಮುದಾಯದ ಎಲ್ಲ ವಿಭಾಗಗಳನ್ನೂ ಒಂದುಗೂಡಿಸಲು ಸದಾ ಪ್ರಯತ್ನ ಮಾಡಿದೆ. ಕೋಮುವಾರು ಕಚ್ಚಾಟಗಳಲ್ಲಿ ನಮ್ಮ ನಾಯಕರು ಎಂದೂ ತೊಡಗಿಕೊಳ್ಳಲಿಲ್ಲ. ಹಿಂದೂಗಳು, ಮುಸ್ಲಿಮರು, ಪಾರ್ಸಿಗಳು, ಜೈನರು ಮತ್ತು ಬೌದ್ಧರು ಒಂದಾಗಿ ಇರಬಹುದಾದ ಏಕಮೇವ ಸಂಸ್ಥೆಯೆಂದರೆ ಕಾಂಗ್ರೆಸ್. ರಾಜಕೀಯದಲ್ಲಿ ಧರ್ಮಕಾರಣವಾಗಿ ಯಾವುದೇ ಭಿನ್ನಾಭಿಪ್ರಾಯವನ್ನು ಅಂಗೀಕರಿಸಲು ಅದು ನಿರಾಕರಿಸುತ್ತದೆ. ಧರ್ಮದ ಆಧಾರದ ಮೇಲೆ ಇಂತಿಂಥ ವಿಭಾಗಗಳು ದೇಶದಿಂದ ಪ್ರತ್ಯೇಕಗೊಳ್ಳಬೇಕು ಎಂದು ಹೇಳುವುದು ಧರ್ಮವಲ್ಲ. ಬದಲಿಗೆ ಶುದ್ಧ ರಾಜಕಾರಣ– ಅದು ಒಂದು ದೇಶದ ಐಕಮತ್ಯವನ್ನು ನಾಶಮಾಡುವ ರಾಜಕಾರಣ. ಸರ್ ಸ್ಟ್ಯಾಫರ್ಡ್ ಮತ್ತು ಬ್ರಿಟಿಷ್ ನಾಯಕರನ್ನು ನಾವು ಕೇಳುತ್ತೇವೆ: "ನೂರು ವರ್ಷಗಳ ಹಿಂದೆ ಅಥವಾ ಹಾಗೆ ಹೇಳಬೇಕೆಂದರೆ ಇಪ್ಪತ್ತು ವರ್ಷಗಳ ಹಿಂದೆ ನಿಮ್ಮ ದೇಶದ ವಿವಿಧ ಒಳಪಂಗಡಗಳಿಗೆ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಕೊಟ್ಟಿದ್ದಿದ್ದರೆ ಇಂದು ನಿಮ್ಮಲ್ಲಿ ಯಾವ ಬಗೆಯ ಸರ್ಕಾರ ಇರುತ್ತಿತ್ತು?" ಮತ್ತೆ ಅಮೆರಿಕಕ್ಕೆ ನಾವು ಕೇಳುತ್ತೇವೆ: "ನಿಮ್ಮ ದೇಶದ ಕ್ರೈಸ್ತ ಒಳಪಂಗಡಗಳ ವಿವಿಧ ಸಮುದಾಯಗಳಿಗೆ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಕೊಟ್ಟಿದ್ದಿದ್ದರೆ ಈಗ ನಿಮ್ಮಲ್ಲಿರುವ ರೀತಿಯ ಸರ್ಕಾರ ಆಗಲೂ ಇರುತ್ತಿತ್ತೆ?" ನಮ್ಮ ದೇಶದಲ್ಲಿ ಅಂತರ್ಯುದ್ಧದ ಸಾಧ್ಯತೆಯನ್ನು ಸೃಷ್ಟಿ ಮಾಡಿರುವುದು ಬ್ರಿಟಿಷ್ ಸರ್ಕಾರ. ಈ ಬ್ರಿಟಿಷ್ ಸರ್ಕಾರವು ಹಳೆಯ ಆಟವನ್ನು ಆಡುತ್ತಿದೆ. ಸಂಪುಟದ ಹೇಳಿಕೆಯು ಇದೇ ಮನೋಭಾವವನ್ನು ತೋರಿಸುತ್ತದೆ. ಅವರು ನೀಡಿರುವ ವ್ಯಾಖ್ಯಾನವು ಯಾವ ಅಭಿಪ್ರಾಯವನ್ನು ಒತ್ತಿ ಹೇಳುತ್ತದೆಂದರೆ ಭಾರತೀಯ ಒಕ್ಕೂಟದ ವಿವಿಧ ಗುಂಪುಗಳು ತಮಗೆ ಇಷ್ಟವಾದ ಸಂವಿಧಾನವನ್ನು ತಾವೇ ರಚಿಸಿಕೊಳ್ಳುವ ಪೂರ್ಣ ಅಧಿಕಾರವನ್ನು ಹೊಂದಿರಬೇಕು. ಹಿಂದೆ ಹೇಳಿರುವಂತೆಯೇ ಅವರು ಈಗಲೂ ಹೇಳುತ್ತಾರೆ: ಒಂದು ಪ್ರಾಂತ್ಯವು ಒಂದು ಗುಂಪಿನಲ್ಲಿ ಉಳಿಯಬೇಕೆ ಅಥವಾ ಬೇಡವೇ ಎಂಬ ಪೂರ್ಣ ಆಯ್ಕೆಯನ್ನು ಹೊಂದಿರಬೇಕು; ಆದರೆ ಅವರು ಅದೇ ಸಮಯದಲ್ಲಿ ಒಂದು ಪ್ರಾಂತ್ಯವು ಆ ಹಕ್ಕನ್ನು ಉಪಯೋಗಿಸಿಕೊಳ್ಳುವ ಸಾಧ್ಯತೆಯನ್ನು ನಿರೋಧಿಸುವ ಮೂಲಕ ಈ ಹೇಳಿಕೆಯ ಮಹತ್ತ್ವವನ್ನು ಕುಗ್ಗಿಸುತ್ತಾರೆ. ಒಂದು ಪ್ರಾಂತ್ಯವು ಒಂದು ಗುಂಪಿನಲ್ಲಿರಲು ಅಥವಾ ಇಲ್ಲದಿರಲು ಮುಕ್ತವಾಗಿದೆ ಎಂದು ನೀವು ಹೇಳುತ್ತೀರಿ, ಆದರೆ ಅದೇ ಸಮಯದಲ್ಲಿ ಒಂದು ಗುಂಪಿನಲ್ಲಿರುವ ಎಲ್ಲ ಜನರು ಒಟ್ಟುಗೂಡಿ ತಮ್ಮ ಸಂವಿಧಾನವನ್ನು ರಚಿಸಿಕೊಳ್ಳಬೇಕು ಎಂದು ಹೇಳುತ್ತೀರಿ. ವಾಯವ್ಯ ಗಡಿನಾಡು ಪ್ರಾಂತ್ಯವು ಪಂಜಾಬ್, ಸಿಂಧ್ ಮತ್ತು ಬಲೂಚಿಸ್ತಾನಗಳಿಗೆ ಸೇರಿಸಕೊಳ್ಳಬೇಕು ಮತ್ತು ಅಸ್ಸಾಮ್ ಬಂಗಾಳಕ್ಕೆ ಸೇರಿಕೊಳ್ಳಬೇಕು. ಇವರ ಸಂವಿಧಾನಗಳನ್ನು 'ಬಿ' ಮತ್ತು 'ಸಿ' ಗುಂಪುಗಳು ರಚಿಸುತ್ತವೆ. ಪಂಜಾಬ್, ಸಿಂಧ್ ಮತ್ತು ಬಲೂಚಿಸ್ತಾನಗಳಿಂದ ಕೂಡಿದ ಗುಂಪು ವಾಯವ್ಯ ಗಡಿನಾಡು ಪ್ರಾಂತ್ಯದ ಸಂವಿಧಾನವನ್ನು ರಚಿಸುತ್ತದೆ ಮತ್ತು ಬಂಗಾಳವು ಅಸ್ಸಾಮಿನದನ್ನು ರಚಿಸುತ್ತದೆ. ಇದು ಪ್ರಾಮಾಣಿಕವೆ? ಒಂದು ಪ್ರಾಂತ್ಯವು ಗುಂಪಿನಿಂದ ಹೊರಗೆ ಹೋಗುವ ಅಧಿಕಾರವನ್ನು ಹೊಂದಿದೆ ಎಂದು ನೀವು ಹೇಳುತ್ತೀರಿ ಆದರೆ ಅದು ಗುಂಪಿನಿಂದ ಹೊರಗೆ ಹೋಗದಿರುವಂತೆ ನೀವು ಒಂದು ಸಂವಿಧಾನವನ್ನು ರಚಿಸುತ್ತೀರಿ. ಸಂಪುಟ ನಿಯೋಗದ ಹೇಳಿಕೆಯಲ್ಲಿ ಒಂದು ಪ್ರಾಂತ್ಯವು ಒಂದು ಗುಂಪನ್ನು ಸೇರುವ ಆಯ್ಕೆಯನ್ನು ಹೊಂದಿರುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಹೊರಗೆ ಹೋಗುವ ಆಯ್ಕೆಯನ್ನು ಹೇಳಿಕೆಯ ಕೊನೆಯಲ್ಲಿ ನೀಡಲಾಗಿದೆ. ಮೊದಲನೆಯ ಭಾಗದ ಅರ್ಥವೇನೆಂದರೆ ಗುಂಪುಗಳನ್ನು ರೂಪಿಸುವ ಸಮಯದಲ್ಲಿ ಒಂದು ಪ್ರಾಂತ್ಯಕ್ಕೆ ಆ ಗುಂಪಿನಲ್ಲಿ ಇರುವ ಅಥವಾ ಇಲ್ಲದಿರುವ ಮುಕ್ತ ಆಯ್ಕೆ ಇದೆ. ಅದನ್ನು ನಾವು ಹಾಗೆ ಅರ್ಥಮಾಡಿಕೊಂಡೆವು ಮತ್ತು ಹೀಗೆ ಕಾಂಗ್ರೆಸ್ ಅದನ್ನು ಅಂಗೀಕರಿಸಿತು. ಆದರೆ ಈಗ ಹೇಳಲಾಗುತ್ತಿರುವುದೇನೆಂದರೆ ಗುಂಪುಗಳನ್ನು ರಚನೆ ಮಾಡುತ್ತಿರುವ ಕಾಲದಲ್ಲಿಯೂ ತನ್ನ ಗುಂಪಿನಿಂದ ಹೊರಗಿರಲು ಅಥವಾ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳಲು ಒಂದು ಪ್ರಾಂತ್ಯಕ್ಕೆ ಯಾವುದೇ

ಆಯ್ಕೆ ಇಲ್ಲ. ಇಡೀ ಗುಂಪಿನ ಪ್ರತಿನಿಧಿಗಳು ಅದನ್ನು ರಚಿಸುತ್ತಾರೆ. ಇದರ ಅರ್ಥವೇನೆಂದರೆ, ನಾವು ಭಾರತದ ವಿಭಜನೆಯನ್ನು ಒಪ್ಪಿಕೊಳ್ಳಬೇಕು ಮತ್ತು ಭಾರತವನ್ನು ಎರಡು ಭಾಗಗಳಾಗಿ ವಿಭಜಿಸಲು ಸಿದ್ಧವಾಗಿದ್ದೇವೆಂದು ಬಹಿರಂಗವಾಗಿ ಉದ್ಘೋಷಿಸುತ್ತಿರುವ ವ್ಯಕ್ತಿಗಳ ಕೈಯಲ್ಲಿ ವಾಯವ್ಯ ಗಡಿನಾಡಿನ ಪ್ರಾಂತ್ಯವನ್ನು ಒಪ್ಪಿಸಬೇಕು. ಅಂತರ್ಯುದ್ಧವು ಅನಿವಾರ್ಯವಾದರೆ ಅದು ಬರಲಿ. ಅಂತರ್ಯುದ್ಧದ ಭೀತಿಯನ್ನು ಉಂಟುಮಾಡಿ ತಪ್ಪು ಕೆಲಸವನ್ನು ಮಾಡಲು ನಮ್ಮನ್ನು ಬಲಾತ್ಕರಿಸಲಾಗದು. ಭಾರತದ ಒಂದು ಮೂಲೆಯಲ್ಲಿ ಅಂತರ್ಯುದ್ಧವು ನಡೆಯಬಹುದಾದ್ದು ತೀರ ಸಂಭವನೀಯವೇ. ಅಲ್ಲದೆ ನಾವು ಬ್ರಿಟಿಷರ ವಿರುದ್ಧವೂ ಹೋರಾಡಬೇಕಾಗಿ ಬರಬಹುದು. ಅಂತರ್ಯುದ್ಧದ ಹೆಸರಿನಲ್ಲಿ ಅವರು ನಮ್ಮನ್ನು ಬೆದರಿಸುತ್ತಿದ್ದಾರೆ. ಆದರೆ ವಾಸ್ತವಾಂಶವೇನೆಂದರೆ ಅವರು ನಮ್ಮ ನಡುವೆ ಅಂತರ್ಯುದ್ಧದ ಬೀಜಗಳನ್ನು ಬಿತ್ತುತ್ತಿದ್ದಾರೆ. ನಾವು ಹೊಡೆದಾಡಬೇಕೆನ್ನುವುದು ಅವರ ಅಪೇಕ್ಷೆ, ಅದರಿಂದಾಗಿ ಅವರು ನಮ್ಮ ಮೇಲೆ ದಬ್ಬಾಳಿಕೆ ನಡೆಸಬಹುದು. ಈ ಸಂಗತಿಗಳನ್ನು ಹೇಳುವಾಗ ನನಗೆ ನೋವಾಗುತ್ತಿದೆ. ಬ್ರಿಟಿಷ್ ಜನರ ಬಗೆಗೆ ನನಗೆ ಅಪಾರವಾದ ಗೌರವವಿದೆ. ರಾಜಕೀಯ ಕ್ಷೇತ್ರದಲ್ಲಿ ಅವರು ಬಹಳ ಮುಂದುವರಿದಿದ್ದಾರೆ ಮತ್ತು ಅವರು ಚತುರರು ಮತ್ತು ಸ್ವಾತಂತ್ರ್ಯ ಪ್ರೇಮಿಗಳು. ನಾವು ಅವರಿಂದ ಅನೇಕ ಸಂಗತಿಗಳನ್ನು ಕಲಿತಿದ್ದೇವೆ. ಅವರ ವಿಷಯದಲ್ಲಿ ನನಗೆ ದ್ವೇಷದ ಒಂದು ಕುರುಹೂ ಇಲ್ಲ. ಇಂಗ್ಲೆಂಡಿನಲ್ಲಿ ಒಂದು ಹೊಸ ಯುಗದ ಅರುಣೋದಯವಾಗಿರುವುದಕ್ಕೆ ನನಗೆ ಸಂತೋಷವಾಗಿದೆ. ಅಲ್ಲಿ ಸರ್ಕಾರವು ಲೇಬರ್ ಪಕ್ಷಕ್ಕೆ ಹಸ್ತಾಂತರವಾಗಿದೆ. ಅವರು ಹಳೆಯ ನೀತಿಯನ್ನು ಅದಲು ಬದಲು ಮಾಡಬಲ್ಲರು. ಕಳೆದ ನೂರು ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರದ ನೀತಿಯು ಇತರ ದೇಶಗಳ ಬಗೆಗೆ ಸ್ವಾರ್ಥ ಮತ್ತು ಕುಯುಕ್ತಿಯದಾಗಿತ್ತು. ಆದರೆ ತಮ್ಮದೇ ದೇಶದಲ್ಲಿ ಅವರು ಬಹಳ ಉದಾರಿಗಳು ಮತ್ತು ಪರಸ್ಪರರ ಬಗೆಗೆ ಅಪಾರ ಗೌರವವನ್ನು ಹೊಂದಿರುತ್ತಾರೆ. ತಮ್ಮ ಜನರ ಪ್ರಯೋಜನಕ್ಕಾಗಿ ಅವರು ಬೇರೆ ಜನರ ಮೇಲೆ ಬಲಾತ್ಕಾರ ಮಾಡುವುದು ಮತ್ತು ಶೋಷಣೆ ಮಾಡುವುದು ಯುಕ್ತ ಎಂದು ಪರಿಗಣಿಸುತ್ತಾರೆ. ಹೊಸ ಸರ್ಕಾರದ ಆಗಮನ ಮತ್ತು ಹಳೆಯ ಟೋರಿಗಳ ಪರಾಜಯದಿಂದ ಅವರ ನೀತಿಯು ಸಂಪೂರ್ಣವಾಗಿ ಅದಲು ಬದಲಾಗುತ್ತದೆ ಮತ್ತು ಇಂಗ್ಲೆಂಡಿನ ವಿದೇಶಾಂಗ ನೀತಿಯು ಪ್ರಾಮಾಣಿಕೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಇತ್ತೀಚಿನ ಕೆಲವು ಹೇಳಿಕೆಗಳು ಭಾರತದ ಜನರ ನಡುವೆ ವೈಮನಸ್ಯವನ್ನು ಸೃಷ್ಟಿಸುವ ಗುರಿಯನ್ನು ಮಾತ್ರ ಹೊಂದಿವೆ ಎನ್ನುವುದನ್ನು ನೋಡಿ ನನಗೆ ಆಶಾಭಂಗವಾಗಿದೆ.

ಸಂಪುಟ ನಿಯೋಗದ ಪ್ರಸ್ತಾವಗಳನ್ನು ಒಪ್ಪಿಕೊಂಡು ಕಾಂಗ್ರೆಸ್ ಈ ಸಭೆಗೆ ಬಂದಿತ್ತು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಂವಿಧಾನ ರಚನಾಸಭೆಯು ಸಭೆ ಸೇರಿದ ಮೇಲೆ ಸಂಪೂರ್ಣವಾಗಿ ಬೇರೆಯದೇ ಆದ ಮಾರ್ಗವನ್ನು ಅಂಗೀಕರಿಸಬಹುದು ಎಂದು ಸೂಚಿಸಲು ನಾನು ಬಯಸುತ್ತೇನೆ. ಫ್ರಾನ್ಸ್‌ನಲ್ಲಿ ದೊರೆ ಲೂಯಿಯ ಆಹ್ವಾನದ ಮೇರೆಗೆ ಜನರು ಸಭೆ ಸೇರಿದರು. ಆದರೆ ತಾವು ಏನನ್ನು ಮಾಡಬೇಕೆಂದು ಬಯಸಿದ್ದರೋ ಅದನ್ನು ತಮಗೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕಂಡುಕೊಳ್ಳುತ್ತಿದ್ದಂತೆಯೇ ಅವರು ತಮ್ಮದೇ ಆದ ವಿಧಾನವನ್ನು ಪ್ರಾರಂಭಿಸಿದರು. ತನಗೆ ಹಣ ಮಂಜೂರು ಮಾಡಲು ಅವರನ್ನು ಕರೆದಿದ್ದ ದೊರೆಯು, ಅವರ ಉದ್ದೇಶಗಳನ್ನು ಗಮನಿಸಿ ಅವರನ್ನು ಚೆದರಿಸಲು ಬಯಸಿದನು. ಆದರೆ ಚೆದರಲು ಅವರು ನಿರಾಕರಿಸಿದರು. ನಮ್ಮ ಸಂವಿಧಾನ ರಚನಾಸಭೆಯು ಬ್ರಿಟಿಷ್ ಸರ್ಕಾರದ ಆಹ್ವಾನದ ಮೇರೆಗೆ ಸಮಾವೇಶಗೊಂಡಿದೆ. ಆದರೆ ನಾವು ಬಯಸಿದಂತೆ ಕೆಲಸ ಮಾಡಲು ನಾವು ಮುಕ್ತರಾಗಿದ್ದೇವೆ. ಈ ಸಭೆಯಲ್ಲಿ ಕಾಂಗ್ರೆಸ್ ಭಾಗವಹಿಸುವುದಕ್ಕೆ ನಮ್ಮಲ್ಲಿ ಕೆಲವರು ವಿರೋಧಿಸುತ್ತಿದ್ದರು. ಬ್ರಿಟಿಷರ ಚತುರೋಪಾಯದ ಬಗೆಗೆ ಅವರಿಗೆ ಭೀತಿಯಿತ್ತು. ಆದರೆ ಕಾಂಗ್ರೆಸ್‌ಗೆ ತನ್ನಲ್ಲಿ ಪೂರ್ಣ ವಿಶ್ವಾಸವಿತ್ತು. ನನ್ನ ವಿನಮ್ರ ಧ್ವನಿಯು ಕೂಡ ಸಭೆಗೆ ಬರುವುದರ ಪರವಾಗಿತ್ತು. ನನಗೆ ನನ್ನ ಸಹೋದ್ಯೋಗಿಗಳ ಶಕ್ತಿ ಮತ್ತು ದೃಢ ನಿರ್ಧಾರದಲ್ಲಿ

ನಂಬಿಕೆಯಿತ್ತು. ಈ ಅವಕಾಶವನ್ನು ಕಳೆದುಕೊಳ್ಳಬಾರದು ಎನ್ನುವುದು ನನ್ನ ಅಭಿಪ್ರಾಯವಾಗಿತ್ತು. ಬ್ರಿಟಿಷ್ ಸರ್ಕಾರ ಒಡ್ಡುವ ಅಡಚಣೆಗಳ ಕಾರಣದಿಂದ ನಾವು ಯಶಸ್ಸು ಗಳಿಸಲಾಗದಿದ್ದರೆ ಕನಿಷ್ಠಪಕ್ಷ ಜಗತ್ತಿಗಾದರೂ ಯಾವ ಬಗೆಯ ಸಂವಿಧಾನವನ್ನು ನಾವು ಬಯಸುತ್ತಿದ್ದೇವೆ ಎಂದು ನಾವು ತೋರಿಸಿಕೊಡಬೇಕು. ನಮ್ಮ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅನೇಕ ಉತ್ತಮ ಅಂಶಗಳನ್ನು ಹೇಳಿದ್ದಾರೆ. ಬ್ರಿಟಿಷ್ ಸರ್ಕಾರವು ವಿಧಿಸಿದ ಪರಿಮಿತಿಗಳಿಗೆ ನಮ್ಮನ್ನು ನಾವು ಈಡುಮಾಡಿಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದನ್ನು ಕೇಳಿದಾಗ ನನಗೆ ಹಿಗ್ಗಾಯಿತು.

ಭಾರತವನ್ನು ಭಾಗಗಳಾಗಿ ಒಡೆದು ಪ್ರಾಂತ್ಯಗಳಿಗೆ ಸಂವಿಧಾನವನ್ನು ರಚಿಸುವ ಹಕ್ಕನ್ನು, ಭಾರತವನ್ನು ಇಬ್ಭಾಗ ಮಾಡಲು ಕೃತನಿಶ್ಚಯರಾದ ಜನರ ಕೈಯಲ್ಲಿ ಕೊಡಬೇಕೆಂಬ ಬ್ರಿಟಿಷ್ ಸರ್ಕಾರದ ಪ್ರಸ್ತಾವಗಳನ್ನು ಈ ಸದನದಲ್ಲಿ ನಾವು ಒಪ್ಪಲಾರೆವು. ಈ ವಿಚಾರಗಳನ್ನು ಹೇಳಲು ನಾನು ಇಷ್ಟ ಪಡುವುದಿಲ್ಲ, ಆದರೆ ಹೇಳಬೇಕಾದದ್ದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಅದೇನೆಂದರೆ, ಮುಸ್ಲಿಮ್ ಲೀಗ್ ಪರವಾಗಿ ಬ್ರಿಟಿಷ್ ಸರ್ಕಾರವು ಮಾಡುತ್ತಿರುವ ಪ್ರತಿಪಾದನೆಗಳಲ್ಲಿ ಪ್ರಾಮಾಣಿಕತೆಯ ಕೊರತೆಯನ್ನು ತೋರುತ್ತಿದೆ.

ಮುಸ್ಲಿಮ್ ಲೀಗ್ ಬ್ರಿಟಿಷ್ ಸರ್ಕಾರದ ಮೋರ್ಛಾ ಎಂದು ಯಾರೋ ಒಬ್ಬರು ಸರಿಯಾಗಿಯೇ ಹೇಳಿದ್ದಾರೆ. ಇನ್ನೊಂದು ದಿನ ಪಂಡಿತ್ ನೆಹರು ಕಾಂಗ್ರೆಸ್‌ನಲ್ಲಿ ಹೇಳಿದ್ದೇನೆಂದರೆ ಹಂಗಾಮಿ ಸರ್ಕಾರದಲ್ಲಿ ಬಂದಿರುವ ಲೀಗ್‌ನ ಸದಸ್ಯರು ರಾಜರ ಪಕ್ಷ (ಕಿಂಗ್ಸ್ ಪಾರ್ಟಿ)ದವರ ಹಾಗೆಯೇ ವರ್ತಿಸುತ್ತಿದ್ದರು. ವಾಸ್ತವಾಂಶವೇನೆಂದರೆ ಬ್ರಿಟಿಷ್ ಸರ್ಕಾರವು ಲೀಗ್‌ಗೆ ವಂಚಿಸುತ್ತಾ ಇದೆ. ಅವರು ನಮ್ಮ ದೇಶವಾಸಿಗಳು ಮತ್ತು ನಮ್ಮ ಸೋದರರು. ನಾವು ಸಹ ಅವರೊಡನೆ ಒಂದು ಒಡಂಬಡಿಕೆಗೆ ಬರಲು ಸಿದ್ಧರಾಗಿದ್ದೇವೆ. ಬ್ರಿಟಿಷರು ಅದನ್ನು ತಮ್ಮ ಮೋರ್ಛಾ ಆಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಮತ್ತು ಅದರ ಹಿಂದೆ ನಿಂತು ನಮ್ಮ ಮೇಲೆ ಬಾಣಗಳನ್ನು ಎಸೆಯುತ್ತಿದ್ದಾರೆ. ನಮಗೆ ಬ್ರಿಟಿಷರ ಬಾಣಗಳು ಗೊತ್ತು. ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ನಾವು ರಚಿಸಲಿರುವ ಸಂವಿಧಾನದಲ್ಲಿ ಈ ಬಾಣಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸೋಣ. ಹೀಗೆ ಮಾಡುವಲ್ಲಿ, ನಾವು ಬ್ರಿಟಿಷರು ಮತ್ತು ಅವರ ಕೃಪಾಪೋಷಿತರನ್ನು ಎದುರಿಸಿ ಹೋರಾಡಬೇಕಾದರೆ, ಹಾಗೆ ಮಾಡಲು ನಾವು ಸಿದ್ಧರಾಗಿದ್ದೇವೆ. ಎಲ್ಲ ಅಡೆತಡೆಗಳನ್ನು ನಾವು ದಾಟುತ್ತೇವೆ ಎಂದು ನಮಗೆ ಖಚಿತವಾಗಿ ಗೊತ್ತು. ಇದು ನಮ್ಮ ಪರೀಕ್ಷೆಯ ಕಾಲ. ಯಶಸ್ಸು ಹತ್ತಿರ ಬಂದಂತೆ ಕಷ್ಟಗಳ ಸಮೂಹವೇ ಹಠಾತ್ತಾಗಿ ಕಂಡುಬರುತ್ತದೆ. ಯೋಗಿಗಳು ತಮ್ಮ ಯೋಗಗಳಲ್ಲಿ ಉನ್ನತ ಹಂತಗಳಿಗೆ ಏರತೊಡಗಿದಂತೆ ದೆವ್ವಗಳು, ಪ್ರೇತಗಳು ಮತ್ತು ಕೇಡಿನ ಪಿಶಾಚಿಗಳು ಅವರನ್ನು ಮುತ್ತುತ್ತವೆ. ಅವು ಯೋಗಿಗಳಿಗೆ ಬೆದರಿಕೆ ಹಾಕುತ್ತವೆ ಮತ್ತು ವಂಚಿಸಲು ಪ್ರಯತ್ನಿಸುತ್ತವೆ. ನಾವು ಯಶಸ್ಸಿಗೆ ಹತ್ತಿರದಲ್ಲಿದ್ದೇವೆ. ಅನೇಕ ದುಷ್ಟ ಶಕ್ತಿಗಳು ನಮ್ಮನ್ನು ನಮ್ಮ ಉದ್ದೇಶದಿಂದ ದಿಕ್‌ಚ್ಯುತಿ ಮಾಡಲು ತಲೆ ಎತ್ತಿವೆ. ಅವುಗಳ ಒಳಸಂಚಿಕೆಗೆ ನಾವು ಬಲಿಯಾಗಬಾರದು ಅಥವಾ ಹೆದರಿಕೊಳ್ಳಬಾರದು.

ಸಂವಿಧಾನವನ್ನು ರಚನೆ ಮಾಡುವಾಗ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿಯೆಂದರೆ ನಾವು ಪ್ರಗತಿಯ ಯಾವ ಯೋಜನೆಗಳನ್ನೇ ಮಾಡಲಿ, ಭಾರತವನ್ನು ವಿಭಜಿಸುವ ಪ್ರಸ್ತಾವಕ್ಕೆ ಎಂದೂ ಮಣಿಯಬಾರದು. ಭಾರತವು ಅಖಂಡವಾಗಿ ಉಳಿಯಬೇಕು. ಹೀಗೆ ನಮ್ಮ ಹಿಂದಿನ ನಾಗರಿಕತೆಯನ್ನು ಸಂರಕ್ಷಿಸಿಕೊಳ್ಳುತ್ತಾ, ನಾವು ಮುಂದೆ ಮುಂದೆ ಸಾಗಿ, ಜಗತ್ತಿಗೆ ಶಾಂತಿಯನ್ನು ತರುವಲ್ಲಿ ಅತ್ಯಮೋಘವಾದ ಪಾತ್ರವನ್ನು ವಹಿಸೋಣ.]*

**ಮಾನ್ಯ ಅಧ್ಯಕ್ಷರು** : ಈ ನಿರ್ಣಯವನ್ನು ಮಂಡಿಸಲಾಗಿದೆ ಮತ್ತು ಅನುಮೋದಿಸಲಾಗಿದೆ. ಅಪಾರ ಸಂಖ್ಯೆಯ ತಿದ್ದುಪಡಿಯ ಸೂಚನೆಗಳು ನನಗೆ ಬಂದಿವೆ. ೪೦ಕ್ಕಿಂತ ಹೆಚ್ಚು ತಿದ್ದುಪಡಿಗಳು ಈಗಾಗಲೇ ನನ್ನ ಮುಂದಿವೆ. ಆದ್ದರಿಂದ ಇನ್ನಷ್ಟು ತಿದ್ದುಪಡಿಗಳ ಸೂಚನೆಯನ್ನು ಕೊಡಲು ಮತ್ತಷ್ಟು ಸಮಯವನ್ನು ಕೊಡುವ

ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ತಿದ್ದುಪಡಿಗಳ ಸಂಖ್ಯೆಯನ್ನು ಪರಿಗಣಿಸಿದರೆ, ತಿದ್ದುಪಡಿಯನ್ನು ಮಾಡಲು ಬಯಸುವವರೆಲ್ಲ ಈಗಾಗಲೇ ಅದನ್ನು ಮಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ.

ಈಗ ಅಪರಾಹ್ನ ೧ ಗಂಟೆ. ನಾವು ಈಗ ಮುಕ್ತಾಯ ಮಾಡಬಹುದು ಎಂದು ಭಾವಿಸುತ್ತೇನೆ. ಆದರೆ ಮುಕ್ತಾಯ ಮಾಡುವ ಮೊದಲು ಸದನಕ್ಕೆ ಒಂದು ಸಂಗತಿಯನ್ನು ಸೂಚಿಸಲು ಅಪೇಕ್ಷಿಸುತ್ತೇನೆ. ನಾಳೆಯಿಂದ ಮುಂದಕ್ಕೆ ಭಾಷಣಕಾರರ ಮೇಲೆ ಕಾಲಮಿತಿಯನ್ನು ವಿಧಿಸುವ ಅಹಿತಕರವಾದ ಕರ್ತವ್ಯವನ್ನು ನಾನು ಮಾಡಬೇಕಾಗಿ ಬರಬಹುದು. ಇದು ಮೊದಲನೆಯ ದಿನವಾದುದರಿಂದ ನಡುವೆ ತಲೆಹಾಕಲು ನಾನು ಇಷ್ಟ ಪಡಲಿಲ್ಲ ಮತ್ತು ಭಾಷಣಕಾರರಿಗೆ ಪೂರ್ಣಕಾಲ ಮಾತನಾಡಲು ಅವಕಾಶ ಕೊಟ್ಟೆ.

ನಾಳೆ ಶನಿವಾರವಾದುದರಿಂದ ಸದನವು ಸಭೆ ಸೇರಬೇಕೆಂದು ನಾನು ಅಪೇಕ್ಷಿಸುವುದಿಲ್ಲ. ಶನಿವಾರ ಸಭೆ ಸೇರಬಾರದು ಎಂದು ನಾನು ನಿಯಮವನ್ನೇನು ಮಾಡುತ್ತಿಲ್ಲ. ನಾವು ನಿಯಮಗಳ ಸಮಿತಿಯ ಸಭೆ ಸೇರುತ್ತಿರುವುದರಿಂದ ಈ ಶನಿವಾರ ಇಲ್ಲಿ ಸಭೆ ಸೇರುತ್ತಿಲ್ಲ. ಈ ಸಮಿತಿಯ ಕೆಲಸವು ಸಾಧ್ಯವಾದಷ್ಟು ಬೇಗ ಮುಗಿಯಬೇಕೆನ್ನುವುದು ನನ್ನ ಇಚ್ಛೆ. ಆದ್ದರಿಂದ ಸಮಿತಿಯ ಸದಸ್ಯರಿಗೆ ನಾಳೆ ಇಡೀ ದಿನವನ್ನು ಕೊಡುವ ಸಲುವಾಗಿ ನಾವು ಇಲ್ಲಿ ಸಭೆ ಸೇರುತ್ತಿಲ್ಲ. ನಾವು ಸೋಮವಾರ ಸಂಧಿಸೋಣ, ಸೋಮವಾರ ಅಪರಾಹ್ನ ೩ ಗಂಟೆಗೆ ಸಂಧಿಸೋಣ, ಬೆಳಗ್ಗೆಯಲ್ಲ. ಈ ಸದನವನ್ನು ಸೋಮವಾರ ಅಪರಾಹ್ನ ೩ ಘಂಟೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ಸೋಮವಾರ, ೧೬ನೇ ಡಿಸೆಂಬರ್, ೧೯೪೬ರ ಅಪರಾಹ್ನ ಮೂರು ಗಂಟೆಗೆ ಮುಂದೂಡಲಾಯಿತು.

*[ ] ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ